# ಮಾಧ್ಯಮ ಮಂಗಳ

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

ಸಂಪುಟ: 21 ಸಂಚಿಕೆ: 01 ಜನವರಿ 31, 2021


## ನವ ಭಾರತದ ನಿರ್ಮಾಣಕ್ಕಾಗಿ ನೂತನ ಶಿಕ್ಷಣ ನೀತಿ

### ಉನ್ನತ ಶಿಕ್ಷಣ ಸಚಿವ ಡಾ. ಸಿ. ಎನ್. ಅಶ್ವಥ್ ನಾರಾಯಣ

"ಶಿಕ್ಷಣದಿಂದ ಮಾತ್ರ ನಾಗರಿಕ ಸಮಾಜ ಕಟ್ಟಲು ಸಾಧ್ಯ. ಆದುದರಿಂದ ನಾವುಗಳು ಸೃಜನಶೀಲ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಮಕ್ಕಳ ಶೈಕ್ಷಣಿಕ ಏಳಿಗೆಗೆ ಶ್ರಮಿಸಿ ಮಕ್ಕಳಿಗೆ ವೈಜ್ಞಾನಿಕ ಶಿಕ್ಷಣವನ್ನು ನೀಡಿ ಅವರನ್ನು ಸೃಜನಶೀಲರನ್ನಾಗಿ ಮಾಡಬೇಕಿದೆ.. ಈ ನಮ್ಮ ಕನಸಿನ ನವಭಾರತದ ನಿರ್ಮಾಣಕ್ಕಾಗಿಯೇ ನೂತನ ಶಿಕ್ಷಣ ನೀತಿಯನ್ನು ಆದಷ್ಟು ಬೇಗನೆ ಜಾರಿಗೊಳಿಸಬೇಕಾಗಿದೆ" ಎಂದು ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ ಡಾ. ಸಿ. ಎನ್. ಅಶ್ವಥ್ ನಾರಾಯಣ ಅವರು ಅಭಿಪ್ರಾಯ ಪಟ್ಟರು.

ಶ್ರೀಯುತರು ಮಂಗಳೂರು ವಿಶ್ವವಿದ್ಯಾನಿಲಯದ 41 ನೇ ಸಂಸ್ಥಾಪನಾ ದಿನಾಚರಣೆಯ ಪ್ರಯುಕ್ತ ವಿ.ವಿ. ಯ ಮಂಗಳಾ ಸಭಾಂಗಣದಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಆನ್‌ಲೈನ್ ಮುಖಾಂತರ ಉದ್ಘಾಟಿಸಿ ಮಾತನಾಡಿದರು. ಮುಂದುವರಿದ ಅವರು "ವ್ಯಕ್ತಿಯ ಬದುಕಿನಲ್ಲಿ ಪರಿವರ್ತನೆಯಾಗ ಬೇಕಾದ-ರೆ ಶಿಕ್ಷಣವು ಅತ್ಯಗತ್ಯ. ಇಂದು ವಿಜ್ಞಾನದ ಅಗಾಧ ಬೆಳವಣಿಗೆಯ ಕಾರಣ ಪ್ರಸ್ತುತ ಕಾಲಮಾನವನ್ನು 'ವಿಜ್ಞಾನಯುಗ' ಎಂದು ಗುರುತಿಸಲಾಗುತ್ತಿದೆ. ಇಂದು ಪ್ರತಿಯೊಬ್ಬರಿಗೂ ಜ್ಞಾನದ ಮಾಹಿತಿ ಅವಶ್ಯಕವಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಬದಲಾವಣೆ



ಮಂಗಳೂರು ವಿಶ್ವವಿದ್ಯಾನಿಲಯದ 41 ನೇ ಸಂಸ್ಥಾಪನ ದಿನಾಚರಣೆಯನ್ನುಕೈಗಾ ಅಣುಸ್ಥಾವರದ ನಿರ್ದೇಶಕರಾದ ಶ್ರೀ ಆರ್. ಸತ್ಯನಾರಾಯಣ ಅವರು ಉದ್ಘಾಟಿಸುತ್ತಿರುವುದು.

ತರುವ ಉದ್ದೇಶದಿಂದ ಕೇಂದ್ರ ಸರಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಇದನ್ನು ರಾಜ್ಯದಲ್ಲಿ ಶೀಘ್ರವೇ ಅನುಷ್ಠಾನಗೊಳಿಸುವ ಪ್ರಯತ್ನವು ನಡೆಯುತ್ತಿದೆ ಎಂದರು.

ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೈಗಾ ಅಣುಸ್ಥಾವರದ ನಿರ್ದೇಶಕರಾದ ಆರ್. ಸತ್ಯನಾರಾಯಣ ಅವರು ಮಾತನಾಡಿ ತರಗತಿಯಲ್ಲಿ ಮಾಡುವ ಬೋಧನೆಗಳು ಉದ್ಯೋಗಕ್ಕೆ ಪೂರಕವಾಗಿಲ್ಲ. ಸೌಲಭ್ಯಗಳ ಕೊರತೆ ಅಷ್ಟೇನೂ ಇರದಿದ್ದರೂ ಉಪಯೋಗಿಸುವ ವಿಧಾನ ತಿಳಿದಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಬೇಲಿಯೇ ಎದ್ದು ಹೊಲ ಮೇಯುವಂತಾಗಿದ್ದು, ನಮ್ಮ ನಡುವಿನ ಅತ್ಯುತ್ತಮ ಶಿಕ್ಷಣ ಪಡೆದುಕೊಂಡವರೇ ಇದರ ಪ್ರಮುಖ ಫಲಾನುಭವಿಗಳಾಗಿರುವುದು ವ್ಯವಸ್ಥೆಯ ದುರಂತ. ಈ ದೇಶದ ಗೌರಾವನ್ವಿತ ನಾಗರಿಕರಾಗಿ ಅವರ ಜವಾಬ್ದಾರಿಯನ್ನರಿತು ಸಮಷ್ಟಿ ಹಿತದ ಕೆಲಸ ಮಾಡಬೇಕಿತ್ತು. ಆದರೆ ಸ್ವಾತಂತ್ರ್ಯ ಪಡೆದು ಏಳು ದಶಕಗಳು ಸಂದಿದ್ದರೂ ಆಗಬೇಕಿದ್ದ ಯಾವ ಕೆಲಸಗಳೂ ಪರಿಪೂರ್ಣವಾಗಿ ಆಗಿಲ್ಲ. ಇಂದು ದೇಶ ಯಾವ ಮಟ್ಟಕ್ಕೆ ಸದೃಢವಾಗಿ ಬೆಳೆಯಬೇಕಿತ್ತೋ, ಆ ನಿರೀ-ಕ್ಷೆಯ ಮಟ್ಟವನ್ನು ಮುಟ್ಟಲು ಈ ವರೆಗೂ ಸಾಧ್ಯವಾಗಲಿಲ್ಲ" ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ವಿ.ವಿ. ಸಿಂಡಿಕೇಟ್ ಸದಸ್ಯ ಪ್ರೊ. ಕರುಣಾಕರ್ ಕೋಟೆಗಾರ್ ಅವರು ಕನ್ನಡ ಭಾಷೆಯಲ್ಲಿ ತಾವೇ ಸ್ವತಃ ನಿರ್ಮಿಸಿದ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ವೀಡಿಯೋ ಚಿತ್ರವನ್ನು ಮಾನ್ಯ ಉಪ ಮುಖ್ಯ ಮಂತ್ರಿಗಳು ಅನಾವರಣಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿ.ವಿ.ಯ ಕುಲಪತಿ ಪ್ರೊ. ಪಿ.ಎಸ್. ಯಡಪಡಿತ್ತಾಯ ಅವರು ವಹಿಸಿದ್ದರು. ಕುಲಸಚಿವ ಕೆ.ರಾಜು ಮೊಗವೀರ ಅವರು ಸ್ವಾಗತಿಸಿ, ಹಣಕಾಸು ಅಧಿಕಾರಿ ಪ್ರೊ. ಬಿ. ನಾರಾಯಣ ವಂದಿಸಿದರು. ಆಂಗ್ಲಭಾಷಾ ಪ್ರಾಧ್ಯಾಪಕ ಡಾ. ರವಿಶಂಕರ್ ರಾವ್ ಹಾಗೂ ಕನಕದಾಸ ಅಧ್ಯಯನ ಪೀಠದ ಸಂಯೋಜಕ ಡಾ. ಧನಂಜಯ ಕುಂಬ್ಳೆ ಕಾರ್ಯಕ್ರಮ ನಿರೂಪಿಸಿದರು.

## ಮಹಾಮಾರಿಯಲ್ಲ ಕರೋನಾ ವಿಶ್ವ ಗುರುವದು..!




ಕರೋನಾದಿಂದ ಋಣಾತ್ಮಕ ಚಿಂತನೆಗಳು ಅಗತ್ಯವಿಲ್ಲ. ಅದು ಮಹಾಮಾರಿ ಅಲ್ಲ ಬದಲಿಗದು ವಿಶ್ವಗುರು. ಏಕೆಂದರೆ ಅದು ಸಂಕಷ್ಟಗಳನ್ನು ತಂದರೂ ಸಹ ಅವಕಾಶಗಳ ಕಿಟಕಿಯನ್ನು ತೆರೆದಿಟ್ಟಿದೆ, ಹೊಸದನ್ನು ಕಲಿಯಲು, ಹೊಸತನ್ನು ಪ್ರಯತ್ನಿಸಲು. ಕಣ್ಣಿಗೆ ಕಾಣದ ವೈರಾಣುವಿಗೆ ಧೃತಿಗೆಡುವ ಅಗತ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಹೇಳಿದಂತೆ ಜೀವ ಉಳಿಸಿ ಜೀವನವನ್ನು ರಕ್ಷಿಸೋಣ. ಕನಸುಗಳನ್ನು ನನಸಾಗಿಸುವ ಪ್ರಯತ್ನ ಪಡೋಣ. ಕರೋನಾದ ಪರಿಣಾಮ ಮರೆಯೋದು ಬೇಡ ಅದನ್ನೇ ಪಾಠವಾಗಿ ಪರಿಭಾವಿಸಿ ಮುಂಬರುವ ಸಮಸ್ಯೆಗಳನ್ನು ಎದುರಿಸುವ. ಮುಂದಿನ ದಿನಗಳಲ್ಲಿ ಬರ ಬಹುದಾದ ಕರೋನಾದ ಎರಡನೇ ಅಲೆಯ ಬಗ್ಗೆ ಜಾಗೃತಿಯೂ ಇರಲಿ. ಆದರೆ ಅನಾವಶ್ಯಕ ಭಯ ಬೇಡ. ಹಾಗೆಂದು ಉಢಾಫೆಯಿಂದ ಮೈ ಮರೆಯದೆ ಸದಾ ಜಾಗರೂಕರಾಗಿ ಸಂಕಷ್ಟಗಳು ಎದುರಾದರೆ ಎದೆಗುಂದದೆ ಎದುರಿಸೋಣ. ಹೊಸ ವರುಷವನ್ನು ಧನಾತ್ಮಕ ಚಿಂತನೆಯೊಂದಿಗೆ ಎದುರುಗೊಳ್ಳೋಣ.2020ರ ಕರಾಳ ಛಾಯೆಯನ್ನು ಮರೆತು ಹುಮ್ಮನಸ್ಸಿನಿಂದ ಏಕತೆಯಿಂದ ಪ್ರಗತಿಯೆಡೆಗೆ ಸಾಗೋಣ. ಎಲ್ಲರಿಗೂ ಹೊಸ ವರ್ಷ ಹೊಸತನವನ್ನು ತರಲಿ ಎಂದು ಆಶಿಸುತ್ತೇನೆ. ಸಾಮಾಜಿಕ ಅಂತರ, ಮಾಸ್ಕ್ ಧರಿಸೋದು, ಸ್ಯಾನಿಟೈಸರ್ ಮಾಡಿಕೊಳ್ಳುವ ಮೂಲಕ ವಿಶ್ವ ವೈರಾಣುವನ್ನು ಗೆಲ್ಲೋಣ ಎಂಬ ಸದಾಶಯವನ್ನು ವ್ಯಕ್ತಪಡಿಸಿದರು.

## ಸುಸ್ಥಿರ ಹಸಿರ ಕ್ಯಾಂಪಸ್ - ರಾಷ್ಟ್ರೀಯ ಪ್ರಥಮ ರ‍್ಯಾಂಕ್

### ಮಂಗಳೂರು ವಿ.ವಿ. ಯ ಮಕುಟಕ್ಕೊಂದು ಗರಿಮೆ

"ಮಂಗಳೂರು ವಿ.ವಿ.ಯು ಅಂತರ ರಾಷ್ಟ್ರೀಯ ಮಟ್ಟದ ಸುಸ್ಥಿರ ಹಸಿರ ಕ್ಯಾಂಪಸ್‌ನ ಮೌಲ್ಯಮಾಪನ ಸಮೀಕ್ಷೆಯಲ್ಲಿ 2020 ರ ಸಾಲಿನ ರಾಷ್ಟ್ರೀಯ ಮಟ್ಟದ ಪ್ರಥಮ ರ‍್ಯಾಂಕನ್ನು ಪಡೆದು ಕೊಳ್ಳಲು ಕಾರಣರಾದ ಮತ್ತು ಮಂಗಳೂರು ವಿ.ವಿ.ಯು ನಿಗದಿಪಡಿಸಿದ ಹಲವು ಹಸಿರೀಕರಣ ಮತ್ತು ಸ್ವಚ್ಛತಾ ಕಾರ್ಯ ಯೋಜನೆಗಳಲ್ಲಿ ತುಂಬು ಮನಸ್ಸಿನ ಸಹಕಾರ ಮತ್ತು ಪ್ರಾಮಾಣಿಕ ಬದ್ಧತೆಯಿಂದ ಪಾಲ್ಗೊಂಡು ಈ ಅಭೂತಪೂರ್ವ ಯಶಸ್ಸಿನ ಪಾಲುದಾರರಾದ ನಿಮ್ಮೆಲ್ಲರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು" ಎಂದು ಮಂಗಳೂರು ವಿ.ವಿ. ಯ ಕುಲಪತಿಗಳಾದ ಪ್ರೊಫೆಸರ್, ಡಾ.ಸುಬ್ರಹ್ಮಣ್ಯ ಯಡಪಡಿತ್ತಾಯ ಅವರು ತಿಳಿಸಿದರು.

ಯೂನಿವರ್ಸಿಟಾಸ್ ಇಂಡೋನೇಷ್ಯಾ ಸಂಸ್ಥೆ ವಿಶ್ವದಾದ್ಯಂತ ನಡೆಸಿದ ಸುಸ್ಥಿರ ಹಸಿರ ಕ್ಯಾಂಪಸ್‌ನ (ಯು.ಐ.ಗ್ರೀನ್‌ಮ್ಯಾಟ್ರಿಕ್ಸ್) ಸಮೀಕ್ಷೆಯಲ್ಲಿ ನಿಗದಿ ಪಡಿಸಿದ ಆರು ವಿಷಯ ಸೂಚಿಗಳಲ್ಲಿ 7200 ಅಂಕಗಳನ್ನು ಗಳಿಸಿಕೊಂಡ ಮಂಗಳೂರು ವಿ.ವಿ. ರಾಷ್ಟ್ರ ಮಟ್ಟದ ಪ್ರಥಮ ಸ್ಥಾನದ ಗರಿಮೆಯನ್ನು ತನ್ನದಾಗಿಸಿಕೊಂಡ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಕೃತಜ್ಞತಾ ಸಮಾರಂಭದಲ್ಲಿ ಮಾತಾಡಿದ ಕುಲಪತಿಗಳು ಮುಂದುವರಿದು "ಈ ಯಶಸ್ಸನ್ನು ನಿರಂತರವಾಗಿಸುವ ನಿಮ್ಮ ಪ್ರಯತ್ನಗಳೂ




ಸುಸ್ಥಿರವಾಗಿ ಮತ್ತಷ್ಟು ಪರಿಣಾಮಕಾರಿಯಾಗಿ ಮುಂದುವರಿಯಬೇಕು. ಸ್ವಚ್ಛತೆ ಮತ್ತು ಹಸಿರ ಪೋಷಣೆ ನಿಮ್ಮ ಧ್ಯೇಯವಾಗಬೇಕು ಎಂದು ನೆರೆದಿದ್ದ ಎನ್.ಎಸ್.ಎಸ್. ವಿದ್ಯಾರ್ಥಿ ಬಳಗ ಮತ್ತು ಸ್ವಚ್ಛತಾ ಸಿಬ್ಬಂದಿಗೆ ತಿಳಿ ಹೇಳಿದರು. ಈ ಕೃತಜ್ಞತಾ ಸಮಾರಂಭದ ನಂತರ ವಿದ್ಯಾರ್ಥಿ ಸಮುದಾಯ ಮತ್ತು ಸ್ವಚ್ಛತಾ ಸಿಬ್ಬಂದಿಗಳು ಶ್ರಮ ದಾನ ಕಾರ್ಯದಲ್ಲಿ ಪಾಲ್ಗೊಂಡರು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಡಾ.ಗೋವಿಂದ ರಾಜು, ಮುಖ್ಯ ಅಭಿಯಂತರರಾದ ಶ್ರೀಉಮೇಶ್ ಭಟ್ ವಿ.ವಿ.ಯ ವಿಶೇಷಾಧಿಕಾರಿಗಳಾದ ಡಾ.ಚಂದ್ರು ಹೆಗ್ಗಡೆ ಮತ್ತು ವಿ.ವಿ.ಯ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

1. ಮಂಗಳೂರು ವಿ.ವಿ. ಸುಸ್ಥಿರ ಹಸಿರ ಅಭಿವೃದ್ಧಿ ಯೋಜನೆಗಳಿಗಾಗಿ ರಾಷ್ಟ್ರದಲ್ಲಿಯೇ 2020 ರ ಸಾಲಿನ ಪ್ರಪ್ರಥಮ ಸುಸ್ಥಿರ ಹಸಿರ ಕ್ಯಾಂಪಸ್.
2. 7200 ಅಂಕಗಳನ್ನು ಗಳಿಸಿಕೊಂಡ ಮಂಗಳೂರು ವಿ.ವಿ. ರಾಷ್ಟ್ರ ಮಟ್ಟದ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.
3. ವಿಶ್ವದಲ್ಲಿ 139ನೇ ಶ್ರೇಣಿಯನ್ನು ಪಡೆದುಕೊಂಡಿದ್ದು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಯು.ಐ.ಗ್ರೀನ್ ಮ್ಯಾಟ್ರಿಕ್ಸ್ ಸಮೀಕ್ಷೆಯಲ್ಲಿ ಈ ಬಾರಿ 84 ದೇಶಗಳ 922 ವಿ.ವಿಗಳು ಪಾಲ್ಗೊಂಡಿದ್ದು ನೆದರ್ ಲ್ಯಾಂಡ್‌ನ ವ್ಯಾಗ್‌ನಿಂಗನ್ ರಿಸರ್ಚ್ ಯೂನಿವರ್ಸಿಟಿ ವಿಶ್ವದ ಪ್ರಥಮ ಸ್ಥಾನವನ್ನು ತನ್ನ ಬಗಲಿಗೆರಿಸಿಕೊಂಡಿದೆ.
4. ಈ ಸಮೀಕ್ಷೆಯಲ್ಲಿ ದೇಶದ 31 ಉನ್ನತ ಶಿಕ್ಷಣ ಸಂಸ್ಥೆಗಳು ಭಾಗವಹಿಸಿದ್ದು ತಮಿಳು ನಾಡಿನ ಕಲಾಸಿಂಘಂ ಅಕಾಡೆಮಿ ಆಫ್ ಎಜುಕೇಷನ್ ಆ್ಯಂಡ್ ರಿಸರ್ಚ್ ಸಂಸ್ಥೆ ವಿಶ್ವ ರ‍್ಯಾಂಕಿಗ್ ನಲ್ಲಿ 169 ನೇ ಸ್ಥಾನ ಹಾಗೂ ಸ್ಥಳೀಯ ಮಣಿಪಾಲ್ ಆಕಾಡೆಮಿ ಆಫ್ ಹೈಯರ್ ಎಜುಕೇಷನ್ 169 ಸ್ಥಾನವನ್ನು ಪಡೆದುಕೊಂಡಿದೆ.

## ಉಸಿರಿನೊಳಿತಿನ ಹಸಿರ ಪರಿಸರಕ್ಕೆ ಪಣ



ವಿದ್ಯಾರ್ಥಿಗಳನ್ನು ಕುರಿತು ಕುಲಸಚಿವ ಕೆ.ರಾಜು ಮೊಗವೀರ ಅವರು ಮಾತನಾಡಿ,"ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವ ಗ್ರೀನ್ ಮೆಟ್ರಿಕ್ಸ್ ಸರ್ವೆಯಲ್ಲಿ ಭಾರತದಲ್ಲೇ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ವಿಶ್ವದಲ್ಲಿ 139ನೇ ಸ್ಥಾನ ಪಡೆದುಕೊಂಡಿರುವುದು ಹೆಮ್ಮೆಯ ವಿಚಾರ.

ವಿ.ವಿ ಆವರಣವನ್ನು ಇನ್ನಷ್ಟು ಹಸಿರೀಕರಣಗೊಳಿಸುವಲ್ಲಿ ಸತತ ಪ್ರಯತ್ನ ನಡೆಸುತ್ತೇವೆ. ಇದರಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವವೂ ಬಹಳ ಮುಖ್ಯ.ಹಸಿರು ಸಂರಕ್ಷಣೆಯ ಜೊತೆ ಜೊತೆಗೆ ನೀರಿನ ಸದ್ಬಳಕೆ ಹಾಗೆಯೇ ಮುಂದಿನ ವರ್ಷಕ್ಕೆ ಮಳೆನೀರು ಕೊಯ್ಲನ್ನು ಮಾಡುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ.

ಮಳೆ ನೀರನ್ನು ಇಂಗಿಸಲು ಇಂಗು ಗುಂಡಿ ನಿರ್ಮಿಸುವ ಯೋಜನೆಯೂ ಸಹ ಇದರೊಂದಿಗೆ ಸೇರಿಕೊಂಡಿದೆ. ಇದು ರಾಜ್ಯಮಟ್ಟದಲ್ಲೇ ಒಂದು ಮಾದರಿ ಪ್ರಯತ್ನವಾಗಲಿದೆ.

ಪ್ರಕೃತಿಗೆ ಹಾನಿಕಾರಕ ಎನಿಸುವ ಪ್ಲಾಸ್ಟಿಕ್ ಬಳಕೆಯನ್ನು ಗಣನೀಯವಾಗಿ ಕಡಿಮೆ ಮಾಡುವ ಪ್ರಯತ್ನ ನಡೆಸಲಾಗುವುದು. ಇದಕ್ಕೂ ವಿದ್ಯಾರ್ಥಿಗಳ ಸಹಕಾರ ಬಹಳ ಮುಖ್ಯ.

ವಿಶ್ವವನ್ನು ಕಾಡುತ್ತಿರುವ ಕೊರೋನಾ ಬಗ್ಗೆ ಜಾಗೃತೆಯಿರಲಿ, ಹಾಗೆಯೇ ಆರೋಗ್ಯದ ಕಡೆಗೆ ಗಮನ ಹರಿಸುವುದೂ ಅತ್ಯಗತ್ಯ. ಸಾಮಾಜಿಕ ಅಂತರ, ಆಗಾಗ ಕೈತೊಳೆಯುವುದು, ಮುಖ ಗವಸು ಧರಿಸುವುದನ್ನು ತಪ್ಪದೇ ಪಾಲಿಸೋಣ" ಎಂದರು. ಹಾಗೂ ವಿದ್ಯಾರ್ಥಿ ಬಳಗ ಮತ್ತು ವಿ.ವಿ.ಯ ಸಿಬ್ಬಂದಿಗಳಿಗೆ ಹೊಸ ವರ್ಷ ಶುಭದಾಯಕವಾಗಿರಲಿ ಎಂದು ಆಶಿಸಿದರು.

## ಮನದುಂಬಿದ ಕಾಮನೆಗಳು ನಮ್ಮ ರಕ್ಷಣೆಯೇ ಇತರರ ರಕ್ಷಣೆ



ಹೊಸ ವರ್ಷದ ನಿರೀಕ್ಷೆಯಲ್ಲಿದ್ದೇವೆ. ಆದರೆ ಇದು ಕ್ಯಾಲೆಂಡರ್ ವರ್ಷ ಅಷ್ಟೆ ಪ್ರತಿ ದಿನವೂ ಹೊಸತು ಪ್ರತಿ ಕ್ಷಣವೂ ಹೊಸತು.ಕೋವಿಡ್19 ನಿಯಂತ್ರಣಕ್ಕೆ ಬಂತು ಎಂಬುವಾಗ ಎರಡನೇ ಅಲೆಯ ಭೀತಿ ಎದುರಾಗಿದೆ. ಆದರೆ ಈ ಹಿಂದಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಈ ವೈರಾಣುವನ್ನು ಗೆಲ್ಲಬಹುದು ಎಂದುಕೊಂಡಿದ್ದೇನೆ. ಇದಕ್ಕೆ ಸಂಘಟನಾತ್ಮಕ ಹೋರಾಟ ಅಗತ್ಯ ಅಷ್ಟೇ. ನಾವು ನಮ್ಮನ್ನು ರಕ್ಷಿಸಿಕೊಳ್ಳುತ್ತಾ ಇತರರನ್ನು ರಕ್ಷಿಸೋಣ.

ಸಂಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ಚಾಚೋಣ. ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಸಾಧ್ಯವಾದಷ್ಟು ಕಾರ್ಯಗತಗೊಳಿಸುವ ಪ್ರಯತ್ನ ವಿ.ವಿ. ಮಾಡುತ್ತದೆ. ಇದಕ್ಕೆ ವಿದ್ಯಾರ್ಥಿಗಳ ಸಹಕಾರ ಅಗತ್ಯ. ಹೊಸ ವರ್ಷ ಹೊಸತನ ತರಲಿ ಪ್ರತಿದಿನವೂ ಹೊಸತನ ತುಂಬಲಿ. ಎಲ್ಲರಿಗೂ ಒಳಿತಾಗಲಿ. ಹಾಗೆಯೇ ನಡೆದುಕೊಳ್ಳೋಣ ಎಂದು ಪರಿಕ್ಷಾಂಗ ಕುಲ ಸಚಿವರಾದ ಪ್ರೊ. ಪಿ.ಎಲ್. ಧರ್ಮ ಶುಭ ಹಾರೈಸಿದರು.

## ಭಾರತೀಯ ಶಿಕ್ಷಣ ವ್ಯವಸ್ಥೆಗೊಂದು ಕಾಯಕಲ್ಪ: ನೂತನ ಶಿಕ್ಷಣ ನೀತಿ: - ಪ್ರೊ.ಕರುಣಾಕರ್ ಕೋಟೆಗಾರ್



ಸಿಂಡಿಕೇಟ್ ಸದಸ್ಯ ಪ್ರೊ. ಕರುಣಾಕರ್ ಕೋಟೆಗಾರ್

"ವ್ಯಕ್ತಿಯ ಬದುಕಿನಲ್ಲಿ ಪರಿವರ್ತನೆ ಆಗಬೇಕಾದರೆ ಶಿಕ್ಷಣ ಅತ್ಯಗತ್ಯ. ಅಸ್ತಿತ್ವದಲ್ಲಿರುವ ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಅಭೂತ ಪೂರ್ವ ಬದಲಾವಣೆ? ತರುವ ಉದ್ದೇಶದಿಂದ ಕೇಂದ್ರ ಸರಕಾರ ಈ ವರ್ಷ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ.

ಸುಮಾರು 34 ವರ್ಷಗಳ ಬಳಿಕ ಶಿಕ್ಷಣ ವ್ಯವಸ್ಥೆಯಲ್ಲಿರುತ್ತಿರುವ ಬದಲಾವಣೆ ಇದಾಗಿದ್ದು, 2015 ರಿಂದಲೇ ಈ ಕುರಿತಂತೆ ಬಹಳಷ್ಟು ಸಂವಾದಗಳು ನಡೆದಿದ್ದು ಈ ಸಂವಾದಗಳ ಫಲಶೃತಿಯೇ ರಾಷ್ಟ್ರೀಯ ನೂತನ ಶಿಕ್ಷಣ ನೀತಿ.

ಮಕ್ಕಳ ಕಲಿಕಾ ಸಾಮರ್ಥ್ಯದ ಆಧಾರದ

ನೂತನ ಶಿಕ್ಷಣ ನೀತಿಯ ಪ್ರಮುಖಾಂಶಗಳು

1. ಮೊದಲಿದ್ದ 7+3+2+3 ಶಿಕ್ಷಣ ವ್ಯವಸ್ಥೆಯು 5+3+3+4 ಮಾದರಿಯಾಗಿ ಬದಲಾವಣೆಯಾಗಿದೆ. ಇದರ ಪ್ರಕಾರ ಮೊದಲ ಐದು ವರ್ಷಗಳು ಅಡಿಪಾಯ ಹಂತ, ಮೂರರಿಂದ ಐದನೇ ತರಗತಿಯ ವರೆಗಿನ ಮೂರು ವರ್ಷಗಳನ್ನು ಪೂರ್ವಸಿದ್ಧತಾ ಹಂತವಾಗಿ ವಿಂಗಡಿಸಲಾಗಿದೆ.
2. ಉನ್ನತ ಶಿಕ್ಷಣದ ಜೊತೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲೂ ಮಹತ್ವ ಬದಲಾವಣೆ ಮಾಡುವುದರ ಮೂಲಕ ಕನಿಷ್ಠ 5ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಲ್ಲಿಯೇ ಕಲಿಕೆಗೆ ಒತ್ತು ನೀಡಲಾಗಿದೆ.
3. ಯಾವುದೇ ವಿದ್ಯಾರ್ಥಿ ಮೇಲೆ ಯಾವುದೇ ಭಾಷೆಯನ್ನು ಹೇರುವುದಿಲ್ಲ ಎಂದು ನೀತಿಯಲ್ಲಿ ತಿಳಿಸಲಾಗಿದೆ.ಅಲ್ಲದೇ, ಶಾಲಾ ಪೂರ್ವ ಕಲಿಕೆಯಿಂದ ಪ್ರೌಢ ಶಿಕ್ಷಣದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಖಾತರಿಯನ್ನು ನೀಡಲಾಗಿದೆ.
4. ಖಾಸಗಿ ಮತ್ತು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಗೆ ಒಂದೇ ರೀತಿ ನಿಯಮಗಳು ಅನ್ವಯವಾಗಲಿದೆ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ.

ಮೇಲೆ ರೂಪುಗೊಂಡಿರುವ ಈ ನೀತಿಯ ಹಿನ್ನೆಲೆಯಲ್ಲಿ 6 ರಿಂದ 8 ವರ್ಷದ ಮಕ್ಕಳ ಮೆದುಳು ಶೇಕಡಾ 80 ರಷ್ಟು ಬೆಳೆದಿರುವುದರಿಂದ ಈ ವಯಸ್ಸಿನಲ್ಲೇ ಅವರನ್ನು ಸರಿ ಮಾಡಲಾಗದಿದ್ದರೆ ಮುಂದೆಂದೂ ಅದು ಸಾಧ್ಯವಾಗುವುದಿಲ್ಲ ಎಂದು ಸಿಂಡಿಕೇಟ್ ಸದಸ್ಯ ಪ್ರೊ.ಕರುಣಾಕರ್ ಕೋಟೆಗಾರ್ ಅವರು ಅಭಿಪ್ರಾಯ ಪಟ್ಟರು. ವಿ.ವಿ.ಯ 41ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತಾನ್ನಾಡಿದ ಅವರು ಮುಂದುವರಿದು ಭಾರತದ ಜನರಲ್ಲಿ ಶಿಕ್ಷಣವನ್ನು ಉತ್ತೇಜಿಸಲು ರೂಪಿಸಿದ ಈ ನೀತಿಯು ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಪ್ರಾಥಮಿಕ ಮತ್ತು ಕಾಲೇಜು ಶಿಕ್ಷಣವನ್ನು ಒಳಗೊಂಡಿದೆ.

ಸಮಾನತೆ, ಗುಣಮಟ್ಟ, ಕೈಗೆಟಕುವಿಕೆ ಮತ್ತು ಉತ್ತರದಾಯಿತ್ವದ ಬುನಾದಿಯ ಮೇಲೆ ಈ ರೂಪಿಸಲಾದ ಈ ನೀತಿಯು ಪ್ರಸ್ತುತ ಬದುಕಿಗೆ ಸೂಕ್ತವಾಗುವ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಸರಿಯಾದ ಸಮಯಕ್ಕೆ ಹೊರ ತೆಗೆಯುವ ಗುರಿಯನ್ನು ಹೊಂದಿದೆ.

ಪ್ರಸ್ತುತ ನೀತಿಯು 2022-23 ರಿಂದ ಜಾರಿಯಾಗುವುದರ ಜೊತೆ ಇದು ಶಾಲೆ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಸುಧಾರಣೆಗೆ ದಾರಿ ಮಾಡಿಕೊಡಲಿದೆ" ಎಂದು ತಿಳಿಸಿದರು.

## ಮನುಜ ಮತ... ವಿಶ್ವ ಪಥ...

### ಮಂಗಳೂರು ವಿ.ವಿಯಲ್ಲಿ ವಿಶ್ವ ಮಾನವ ದಿನಾಚರಣೆ

ಜಗದ ಕವಿ ಕುವೆಂಪು ತಮ್ಮ ಅಗಾಧ ಸಾಹಿತ್ಯ ಕೃಷಿಯು ಇಂದಿಗೂ ಎಂದೆಂದಿಗೂ ಅಮರವಾಗಿದೆ ಇಂತಹ ಜಗದ ಕವಿ ಯುಗದ ಕವಿ ವಿಶ್ವ ಮಾನವ ಕುವೆಂಪುರವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವುದು ನಮಗೆಲ್ಲ ಸ್ಫೂರ್ತಿಯಾಗಿದೆ ಎಂದು ಮಂಗಳೂರು ವಿ.ವಿ ಕುಲಪತಿ ಪ್ರೊ.ಎಸ್. ಯಡಪಡಿತ್ತಾಯ ಅವರು ಹೇಳಿದರು. ಅವರು ಮಂಗಳೂರು ವಿಶ್ವ ವಿದ್ಯಾನಿಲಯದ ವತಿಯಿಂದ ಎಸ್.ವಿ.ಪಿ. ಕನ್ನಡ ಅಧ್ಯಯನ ವಿಭಾಗದ ಬಯಲುರಂಗ ಮಂದಿರದಲ್ಲಿ ಆಯೋಜಿಸಲಾಗಿದ್ದ ವಿಶ್ವ ಕವಿ ಕುವೆಂಪು ಅವರ 104 ನೇ ವರುಷದ ಜನ್ಮ ದಿನಾಚರಣೆ-ಯ ಅಂಗವಾಗಿ ನಡೆಸಲಾದ ಕಾವ್ಯಾಗಾಯನ ಮತ್ತು ಅರ್ಥಾನುಸಂಧಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕುವೆಂಪು ಅವರ ಅನುಭಾವಿಕ ಕಾಣ್ಕೆ, ಉದಾತ್ತ ಆಶಯಗಳು ಮತ್ತು ಬದುಕ ಮೌಲ್ಯಗಳ ಕುರಿತು ವಿಶಾಲವಾಗಿ ವಿಶ್ಲೇಷಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕುಲಸಚಿವರಾದ ಡಾ. ರಾಜು ಮೊಗವೀರ ಅವರು ಕನ್ನಡ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ ಹೆಚ್ಚಿಸುವ ಕುವೆಂಪು ಅವರ ಚಿಂತನೆಗಳ ಕುರಿತು ಸವಿವರವಾಗಿ

4ನೇ ಪುಟಕ್ಕೆ...

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

**ಸಂಪಾದಕೀಯ**

## ಹಸಿರೊಡಲ ಬಂದಳಿಕೆಗಳ ನಿಗ್ರಹ ಅನಿವಾರ್ಯ...

ಯೂನಿವರ್ಸಿಟಾಸ್ ಇಂಡೊನೇಷ್ಯಾ ಸಂಸ್ಥೆ ವಿಶ್ವದಾದ್ಯಂತ ನಡೆಸಿದ ಸುಸ್ಥಿರ ಹಸಿರ ಕ್ಯಾಂಪಸ್‌ನ (ಯು.ಐ. ಗ್ರೀನ್ ಮ್ಯಾಟ್ರಿಕ್ಸ್) ಸಮೀಕ್ಷೆಯಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯ ರಾಷ್ಟ್ರದಲ್ಲೇ ಪ್ರಥಮ ಸ್ಥಾನ ಗಳಿಸಿರೊದು ಕರಾವಳಿ ಕನ್ನಡಿಗರಿಗೊಂದು ಹೆಮ್ಮೆ ಮಾತ್ರವಲ್ಲ ಮಂಗಳೂರು ವಿ.ವಿ.ಯ ಹಿರಿಮೆಗೆ ಸಂದ ಗರಿಮೆಯೂ ಹೌದು.

ಭಾರತದ ಇತರ 31 ವಿಶ್ವವಿದ್ಯಾಲಯಗಳ ತೀವ್ರ ಪೈಪೋಟಿಯ ನಡುವೆ 7200 ಅಂಕಿಗಳನ್ನು ಗಳಿಸಿಕೊಂಡ ಮಂಗಳೂರು ವಿ.ವಿ. ರಾಷ್ಟ್ರ ಮಟ್ಟದ ಪ್ರಥಮ ಸ್ಥಾನವನ್ನು ಬಗಲಿಗೇರಿಸಿಕೊಂಡಿದ್ದು ಜಾಗತಿಕ ರ್‍ಯಾಕಿಂಗ್ ನಲ್ಲಿ 139 ನೇ ಸ್ಥಾನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಇದಕ್ಕಾಗಿ ಸಂಸ್ಥೆ ನಿಗದಿ ಪಡಿಸಿದ ಆರು ಸೂಚ್ಯಂಕಗಳಲ್ಲಿ ಸಂರಚನೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ 1250 ಅಂಕಗಳು, ಶಕ್ತಿ ಸಂವರ್ಧನೆ ಮತ್ತು ಹವಾಮಾನ ವೈಪರಿತ್ಯದ ನಿರ್ವಹಣೆಗಾಗಿ 1400, ತ್ಯಾಜ್ಯ ನಿರ್ವಹಣೆಗಾಗಿ 1050, ನೀರಿನ ನಿರ್ವಹಣೆಗಾಗಿ 725, ಸಾರಿಗೆ ನಿರ್ವಹಣೆಗಾಗಿ 1275 ಮತ್ತು ಶಿಕ್ಷಣ ಮತ್ತು ಸಂಶೋಧನಾ ವಲಯದ ಸುಸ್ಥಿರ ಕಾರ್ಯ ಯೋಜನೆಗಳಿಗಾಗಿ 1500 ಅಂಕಗಳ ಮೂಲಕ ಒಟ್ಟು 7200 ಅಂಕಗಳನ್ನು ಗಳಿಸುವ ಮೂಲಕ ಮಂಗಳೂರು ವಿ.ವಿ. ರಾಷ್ಟ್ರ ಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಸ್ಪರ್ಧಿಸಿ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

ಆದರೆ ಜಲಮೂಲಗಳ ನಿರ್ವಹಣೆಯಲ್ಲಿ ಗಳಿಸಿರುವ ಕಡಿಮೆ ಅಂಕಗಳನ್ನು ಗಂಭೀರವಾಗಿ ಪರಿಗಣಿಸಿರುವ ವಿ.ವಿ. ಆಡಳಿತ ಮುಂಬರುವ ವರ್ಷದಲ್ಲಿ ಪರಿಣಾಮಕಾರಿಯಾದ ಉಪಕ್ರಮಗಳನ್ನು ಕೈಗೊಳ್ಳುವ ಯೋಜನೆಗಳನ್ನು ರೂಪಿಸುತ್ತಿರುವುದು ಶ್ಲಾಘನೀಯ.

ಹಾಗೆಯೇ ಯೋಜಿಸಲಾದ ಉಪಕ್ರಮಗಳನ್ನು ಅಷ್ಟೇ ಪರಿಣಾಮಕಾರಿಯಾಗಿ ಜಾರಿಗೊಳಿಸ ಬೇಕಾಗಿರುವುದು ಸಾಂದರ್ಭಿಕ ಅನಿವಾರ್ಯ. ಜತೆಗೆ ಪ್ರಸ್ತುತ ಉಪಕ್ರಮಗಳು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಾದರೆ ಸಾಮುದಾಯಿಕ ಸಹ ಭಾಗಿತ್ವವೂ ಬಹು ಮುಖ್ಯವಾಗಿದೆ, ಇದು ಕೇವಲ ವಿ.ವಿಯ ಸದಸ್ಯರ ಸಹಭಾಗಿತ್ವ ಮಾತ್ರವಲ್ಲ, ಮಾತ್ರವಲ್ಲ ಕ್ಯಾಂಪಸ್ ಸುತ್ತಲಿನ ಗ್ರಾಮ ಸಮುದಾಯಗಳೂ ಈ ಉದಾತ್ತ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕಾಗಿದೆ. ಹಸಿರ ಸಿರಿಗೆ ಪೂರಕವಾಗುವ ಮಳೆ ನೀರು ನಿರ್ವಹಣೆ ಮತ್ತು ತ್ಯಾಜ್ಯ ನಿರ್ವಹಣಾ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ.

ನೀರ ನಿರ್ವಹಣೆಯು ನೀರ ಮೂಲಗಳ ಜತನ ಸಂರಕ್ಷಣೆಯಿಂದಲಷ್ಟೇ ಸಾಧ್ಯ. ಇದಕ್ಕಾಗಿ ಕ್ಯಾಂಪಸ್‌ನ ಹಲವೆಡೆಗಳಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ನೀರ ನಿರ್ವಹಣೆಯ ದೇಸಿ ಜ್ಞಾನವನ್ನು ಒಳಗೊಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವ ಚಿಂತನೆಯನ್ನೂ ನಡೆಸಿದ್ದು, ಅಂತರ್ಜಲ ಹೆಚ್ಚಿಸುವ ಸಲುವಾಗಿ ಕ್ಯಾಂಪಸ್‌ನ ವ್ಯೂಹಾತ್ಮಕ ಸ್ಥಳಗಳಲ್ಲಿ ಒಡ್ಡುಗಳ ನಿರ್ಮಾಣ, ಹಲವೆಡೆಗಳಲ್ಲಿ ಇಂಗು ಗುಂಡಿಗಳು, ಮಳೆ ನೀರ ಕೊಯ್ಲಿಗಾಗಿ ಪ್ರಾಕೃತಿಕವಾಗಿ ವಿನ್ಯಾಸಗೊಳಿಸುವ ಅಂತರ್ಗತ ನೀರ ಸಂಗ್ರಹಾಗಾರಗಳು ಯೋಜಿತ ಉಪಕ್ರಮಗಳ ಭಾಗವಾಗಿವೆ.

ಇದರೊಂದಿಗೆ ಕ್ಯಾಂಪಸ್‌ನ ನೀರು ನಿರ್ವಹಣಾ ವಿಭಾಗದವರಲ್ಲೂ ಜಾಗೃತಿ ಮೂಡಿಸಿ ಹಲವು ತಾಂತ್ರಿಕ ಕಾರಣಗಳಿಂದ ದಿನನಿತ್ಯ ಅನಾವಶ್ಯವಾಗಿ ಪೋಲಾಗುವ ನೀರನ್ನು ಸಮರ್ಪಕ ಬಳಕೆಗೆ ಸಾಧ್ಯವಾಗಿಸಬೇಕು. ಹಾಗೆಯೇ ಯಕ್ಷಗಾನ ಕಲಾಕೇಂದ್ರದ ಬಗಲಲ್ಲಿರುವ ಪುಟ್ಟ ಕೆರೆಯಂತಹ ಜಾಗವನ್ನು ಮತ್ತಷ್ಟು ವಿಶಾಲಗೊಳಿಸಿ, ಅದರಲ್ಲಿ ನೀರು ಬತ್ತದಂತಹ ಸೂಕ್ತ ಕ್ರಮ ಕೈಗೊಂಡು, ದಿನ ನಿತ್ಯ ಜಲಾಗರ ತುಂಬಿ ಹೊರ ಹರಿದು ಪೋಲಾಗುವ ನೀರನ್ನು ಈ ಕೆರೆಯಂತಹ ಜಾಗಕ್ಕೆ ಹರಿಸಿ ಅದನ್ನೊಂದು ಪುಟ್ಟ ಸರೋವರವನ್ನಾಗಿಸಿ ಸುತ್ತಲೂ ಪುಟ್ಟ ಪಾರ್ಕೊಂದನ್ನು ನಿರ್ಮಿಸಿದರೆ ಕ್ಯಾಂಪಸ್‌ನ ಉದ್ಯೋಗಿಗಳು ಮತ್ತು ಅವರ ಕುಟುಂಬಸ್ಥರ ವಾಯು ವಿಹಾರಕ್ಕಾಗಿ ಒಂದು ಆಹ್ಲಾದಕರ ಪರಿಸರವನ್ನೂ ನಿರ್ಮಿಸಿದಂತಾಗುತ್ತದೆ ಜತೆಗೆ ಕ್ಯಾಂಪಸ್‌ನ ಸೌಂದರ್ಯಕ್ಕೊಂದು ಪುಟವಿಟ್ಟಾಂತಾಗುತ್ತದೆ. ಆದರೆ ಮುಂಜಾಗೃತ ಕ್ರಮವಾಗಿ ನಿಂತ ನೀರಿನಲ್ಲಿ ವಂಶಾಭಿವೃದ್ಧಿ ಮಾಡುವ ಕ್ರಿಮಿ ಕೀಟಗಳ ನಿಗ್ರಹಕ್ಕಾಗಿ ಮೆದು ಸ್ವಭಾವದ ಕ್ರಿಮಿ ನಾಶಕಗಳನ್ನು ನಿಯಮಿತವಾಗಿ ಸಿಂಪಡಿಸಬೇಕಾಗುತ್ತದೆ.

ಇನ್ನು ಕ್ಯಾಂಪಸ್‌ನ ಹೊರ ಆವರಣದಲ್ಲಿ ಸುತ್ತಲಿನ ಗ್ರಾಮಸ್ಥರು, ವಿದ್ಯಾವಂತ ನಾಗರೀಕರು ಅತೀ ಬೇಜವಾಬ್ದಾರಿತನದಿಂದ ಮತ್ತು ನಿರ್ಭಿಡೆಯಿಂದ ಎಸೆಯುವ ಪ್ಲ್ಯಾಸ್ಟಿಕ್ ತ್ಯಾಜ್ಯ, ಮದ್ಯದ ಬಾಟಲುಗಳು, ತಿಂದುಳಿದ ಆಹಾರದ ಅವಶೇಷಗಳು ಹಾಗೂ ಇನ್ನಿತರ ಗೃಹಪೋಯೋಗಿ ತ್ಯಾಜ್ಯಗಳು ಕ್ಯಾಂಪಸ್‌ನ ಹೊರ ಆವರಣವನ್ನು ಅಕ್ಷರಶಃ ಕಸದ ತೊಟ್ಟಿಯನ್ನಾಗಿಸಿದೆ. ಈ ನಿಟ್ಟಿನಲ್ಲಿ ವಿ.ವಿ. ಸೂಕ್ತ ಕಠಿಣ ಕ್ರಮ ಕೈಗೊಳ್ಳಬೇಕಿದೆ ಮತ್ತು ಸುತ್ತಲಿನ ಗ್ರಾಮಸ್ಥರಲ್ಲೂ ಈ ಬಗ್ಗೆ ಅರಿವುಂಟು ಮಾಡಬೇಕಿದೆ. ಹಾಗೆಯೇ ಸ್ಥಳೀಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ಲ್ಯಾಸ್ಟಿಕ್ ಬಳಕೆಯನ್ನು ಕಟ್ಟು ನಿಟ್ಟಾಗಿ ನಿಷೇಧಿಸುವಂತೆ ನಾಡ ಪ್ರಮುಖರ ಮನವೊಲಿಸಬೇಕಿದೆ. ಏಕೆಂದರೆ ಪ್ಲ್ಯಾಸ್ಟಿಕ್ ಬಳಕೆಯ ನಿಷೇಧ, ಮತ್ತು ಬೇಜವಾಬ್ದಾರಿತನದ ಕಸ ವಿಲೇವಾರಿಯ ಕಟ್ಟುನಿಟ್ಟಾದ ನಿಯಂತ್ರಣವೇ ಹಸಿರ ಪರಿಸರದ ಬುನಾದಿ.

ಆವರಣದ ಸುತ್ತಲೂ ಅಕೇಶಿಯಾ, ಯೂಕಲಿಪ್ಟಸ್, ಮತ್ತು ನಿಷ್ಪ್ರಯೋಜಕ ಮರಗಳ ಬದಲಾಗಿ ಕರಾವಳಿಯ ಮಣ್ಣಿಗೆ ಒಗ್ಗುವ ಹಣ್ಣಿನ, ಔಷಧೀಯ ಗುಣಗಳ ಮರ ಗಿಡಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಬೇಕಾಗಿದೆ. ಮಣ್ಣಿಗೆ, ನೀರ ಸೆಲೆಗೆ ಮಾರಕವಾಗುವ ಮರ ಗಿಡಗಳನ್ನು ಕಟ್ಟುನಿಟ್ಟಾಗಿ ನಿಗ್ರಹಿಸುವುದರೊಂದಿಗೆ ಕಸ ವಿಲೇವಾರಿಯ ಸೂಕ್ತ ಮಾದರಿಯನ್ನು ಅಳವಡಿಸಿಕೊಳ್ಳಬೇಕಿದೆ. ಹೀಗಾದಲ್ಲಿ ಮಾತ್ರ ಮಂಗಳೂರು ವಿ.ವಿ.ಯ ಶೀತಲ ಹಸಿರ ಪರಿಸರ ಜ್ಞಾನಾರ್ಜನೆಗೆ ಪೂರಕವಾದ ಗುರುಕುಲವಾಗಬಹುದೆಂಬ ಅದಮ್ಯ ನಿರೀಕ್ಷೆಗಳು....

## ಆನ್ ಲೈನ್ ಶಿಕ್ಷಣ ಅನಿವಾರ್ಯವೇ .. .. .. ???

-ಕುಮಾರ ಸುಬ್ರಹ್ಮಣ್ಯ



ಪ್ರಸ್ತುತ ಶಿಕ್ಷಣದಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತಿದ್ದು ಅದರಲ್ಲಿ ಆನ್ ಲೈನ್ ಶಿಕ್ಷಣವೂ ಒಂದು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ಆನ್ ಲೈನ್ ಶಿಕ್ಷಣವು ಎಷ್ಟು ಸಹಕಾರಿ ಹಾಗೆಯೇ ಎಷ್ಟು ಪರಿಣಾಮಕಾರಿ ಎಂಬುದನ್ನು ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ.

ವಿದ್ಯಾರ್ಥಿಗಳ ಮನ ಸ್ಥಿತಿ ಹಾಗೆ ಶಿಕ್ಷಣ ವ್ಯವಸ್ಥೆಯಲ್ಲಿಯೇ ಎಂತಹ ದುಷ್ಪರಿಣಾಮ ಬೀರಿದೆ ಎಂಬುದರ ಬಗ್ಗೆಯೂ ಗಮನಹರಿಸಬೇಕು. ಎಳೆಯ ಕಣ್ಣುಗಳಿಗೆ ಮೊಬೈಲ್ ನಂತಹ ಡಿಜಿಟಲ್ ಸ್ಕ್ರಿನ್‌ನಿಂದಾಗುವ ಪರಿಣಾಮಗಳ ಬಗ್ಗೆಯೂ ಚಿಂತಿಸಬೇಕಾಗಿದೆ.

ಪ್ರಾಥಮಿಕ ಹಂತದ ಕಲಿಕೆಯಲ್ಲಿ ಎದುರಾಗುವ ಸಮಸ್ಯೆಗಳು ಮುಂದಿನ ಹಂತದಲ್ಲಿ ದೊಡ್ಡ ತೊಡಕಾಗುವುದು ಖಂಡಿತ. ಮಾಧ್ಯಮಿಕ ಹಂತದಲ್ಲಿ ವಿದ್ಯಾರ್ಥಿಗಳಲ್ಲಿನ ಹಾರ್ಮೋನ್ ಬದಲಾವಣೆ ಹಾಗೆಯೇ ಅವರ ಮಾನಸಿಕ ಒತ್ತಡಗಳೂ ಹೆಚ್ಚಾಗುವ ಸಾಧ್ಯತೆಗಳೂ ದಟ್ಟವಾಗಿದೆ. ಎಳೆಯ ವಯಸ್ಸಿನ ಮಕ್ಕಳ ಮನಸ್ಥಿತಿಯ ಬಗ್ಗೆ ನುರಿತ ತಜ್ಞ ವೈದ್ಯರ ಸಲಹೆ ಮತ್ತು ಮಕ್ಕಳ ಮೇಲೆ ಆನ್‌ಲೈನ್ ಶಿಕ್ಷಣದ ಗುಣಾವಗುಣಗಳನ್ನು ಪರಿಗಣಿಸಿ ಅನ್‌ಲೈನ್ ಶಿಕ್ಷಣಕ್ಕೊಂದು ಇತಿಮಿತಿಯ ಮಾನದಂಡವನ್ನು ನಿಗದಿ ಪಡಿಸಬೇಕು. ಆನ್‌ಲೈನ್ ತರಗತಿಗಳು ವಿದ್ಯಾರ್ಥಿಗಳಿಗೆ ಯಾವ ರೀತಿಯ ಋಣಾತ್ಮಕ ಪರಿಣಾಮಗಳನ್ನು ಬೀರುತ್ತವೆ. ಎಂಬುದನ್ನು ಸೂಕ್ಷ್ಮವಾಗಿ ಪರಿಗಣಿಸುವ ಅಗತ್ಯ ಇದೆ. ಅಧ್ಯಯನಗಳಲ್ಲಿದೆ ವಿದ್ಯಾರ್ಥಿಗಳ ಮನಸ್ಥಿತಿ ಹಾಗೆ ಅದರ ಅನುಕೂಲಗಳು ಇಲ್ಲಿ ಮುಖ್ಯವಾಗುತ್ತದೆ. ಆನ್‌ಲೈನ್ ಶಿಕ್ಷಣ ನೀಡುವಾಗ ತಂದೆ ತಾಯಿಯು ಜೊತೆಯಲ್ಲಿ ಇರಬೇಕು. ಇದು ದುಡಿಯುವ ತಂದೆ ತಾಯಿಯರ ಮೇಲೆ ಮತ್ತೊಂದು ಹೊರೆ. ಹಾಗೆಯೇ ಮಗುವಿನ ಶಿಕ್ಷಣಕ್ಕಾಗಿ ಮೊಬೈಲ್ ಹೊಂದಿಸುವುದು ಇಂಟರ್‌ನೆಟ್‌ಗೆ ಹಣ ಹೊಂದಿಸುವಂತಹ ಮತ್ತು ಇದಕ್ಕೆ ಪೂರಕವಾಗಿರುವ ಇನ್ನಿತರ ಕಾರ್ಯಗಳು ಮತ್ತೆ ಪೋಷಕರಿಗೆ ಹೊರೆಯಾಗುತ್ತದೆ.

ಎಳೆಯ ವಯಸ್ಸಿನಲ್ಲಿಯೇ ಡಿಜಿಟಲ್ ಉಪಕರಣಗಳ ಅತಿಯಾದ ಬಳಕೆ ಮಾನಸಿಕ ವ್ಯಸನ ಮತ್ತು ಇನ್ನಿತರ ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎಂಬುದು ರಾಜ್ಯದ ನಿಮ್ಹಾನ್ಸ್ ಮಾನಸಿಕ ಆರೋಗ್ಯ ಸಂಸ್ಥೆಯ ಸಮೀಕ್ಷೆ ಮತ್ತು ಒಳ ರೋಗಿಗಳಾಗಿ ದಾಖಲಾದ ಹಲವಾರು ಪ್ರಕರಣಗಳಿಂದ ದೃಢಪಟ್ಟಿದೆ. ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲೇ ಈ ಮಾನಸಿಕ ವ್ಯಸನದ ಗೀಳು ಹೆಚ್ಚುತ್ತಿರುವಾಗ ಈಗಿನ್ನೂ ಬಾಲ್ಯಾವಸ್ಥೆಯಲ್ಲಿರುವ, ಕಿಶೋರ ಪ್ರಾಯದ ಮಕ್ಕಳಲ್ಲಿ ಎಂತಹ ಋಣಾತ್ಮಕ ಪರಿಣಾಮ ಬೀರಬಲ್ಲದು ಎಂಬುದನ್ನು ಅಮೂಲಾಗ್ರವಾಗಿ ಪರಿಶೀಲಿಸಿ ಆ ನಂತರ ಆನ್ಲೈನ್ ಶಿಕ್ಷಣದ ಆದ್ಯತೆಯನ್ನು ಪರಿಗಣಿಸುವುದು ಸಾಂದರ್ಭಿಕ ಅನಿವಾರ್ಯ. ಹಾಗೆಯೇ ಹುಚ್ಚು ಆವೇಗದ ಅಭಿವೃದ್ಧಿಯ ಹೆಸರಲ್ಲಿ ಹಣ ದೋಚುವ ಕಾರ್ಯಕ್ರಮ ಆಗದಿದ್ದರೆ ಒಳಿತು.

**ಆಂದೋಲನ-ಈ ಜೀವ ಈ ಜೀವನ.**

## ಹಮ್ ಕಿಸಿ ಸೇ ಕಮ್ ನಹೀಂ!

-ಪಂಜು ಗಂಗೊಳ್ಳಿ,

ಜನವರಿ 11 ರಂದು ಇಂಡಿಯಾದ ಬೋಯಿಂಗ್ 777-200 ಎಲ್‌ಆರ್ ವಿಮಾನವೊಂದು ಅಮೆರಿಕದ ಸಿಲಿಕಾನ್ ಸಿಟಿ ಸ್ಯಾನ್ ಫ್ರಾನ್ಸಿಸ್ಕೋದಿಂದ ಭಾರತದ 'ಸಿಲಿಕಾನ್ ಸಿಟಿ' ಎಂದು ಹೆಸರಾದ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಜಾಗತಿಕ ದಾಖಲೆಯೊಂದು ಬರೆಯಲ್ಪಟ್ಟಿತು. ಉತ್ತರಧ್ರುವದ ಮೇಲಿಂದ ಹಾರಿ, 16000 ಕಿಮಿ ದೂರವನ್ನು 17 ಗಂಟೆ, 45 ನಿಮಿಷಗಳಲ್ಲಿ ತಡೆರಹಿತವಾಗಿ ಕ್ರಮಿಸಿದ ಆ ವಿಮಾನದ ಪೈಲಟ್‌ಗಳೆಲ್ಲರೂ ಮಹಿಳೆಯರು ಆಗಿದ್ದರು! ಝೋಯಾ ಅಗರವಾಲ್ ಕ್ಯಾಪ್ಟನ್ ಆಗಿದ್ದ ಇದರ ಪೈಲಟ್ ತಂಡದ ಇತರ ಸದಸ್ಯರೆಂದರೆ ಕ್ಯಾ. ಶಿವಾನಿ ಮನ್ನಾಸ್, ಕ್ಯಾ. ಆಕಾಂಕ್ಷಾ ಸೋನಾವಣೆ ಮತ್ತು ಕ್ಯಾ. ಪಾಪಗಿರಿ ತನ್ಮಯೀ.

ಮಹಿಳಾ ಪೈಲಟ್‌ಗಳನ್ನು ಹೊಂದಿದ್ದ ಜಗತ್ತಿನ ಪ್ರಪ್ರಥಮ ವಿಮಾನಯಾನ ನಡೆದದ್ದು 1985 ರಲ್ಲಿ. ಇದು ನಡೆದದ್ದೂ ಭಾರತದ ಕಲ್ಕತ್ತಾ-ಸಿಲ್ಚಾರ್ ವಿಮಾನ ನಿಲ್ದಾಣಗಳ ನಡುವೆ. ಅದರಲ್ಲಿ ಸಹ ಪೈಲಟ್ ಆಗಿದ್ದ ನಿವೇದಿತಾ ಬಾಸಿನ್, ಜೆಟ್ ವಿಮಾನವನ್ನು ಹಾರಿಸಿದ ಅತ್ಯಂತ ಕಿರಿಯ ವಯಸ್ಸಿನ ಮಹಿಳೆ ಎಂಬ ದಾಖಲೆಯನ್ನು ಹೊಂದಿರುವವರು.

ಅವರು 1990 ರ ಜನವರಿ 1 ರಂದು ಮುಂಬೈ-ಔರಂಗಾಬಾದ್-ಉದಯಪುರ ವಿಮಾನ ನಿಲ್ದಾಣಗಳ ನಡುವೆ ಜೆಟ್ ವಿಮಾನವನ್ನು ಹಾರಿಸುವ ಮೂಲಕ ಈ ದಾಖಲೆಯನ್ನು ಮಾಡಿದ್ದರು. ಇವರ ಪತಿ, ಪುತ್ರ ಮತ್ತು ಪುತ್ರಿ ಎಲ್ಲರೂ ಪೈಲಟ್ಟಳಾಗಿರುವುದು ಇವರ ಕುಟುಂಬದ ವಿಶೇಷ! ಮಹಿಳಾ ಪೈಲಟ್ಟಳನ್ನು ಹೊಂದಿರುವ ದೇಶಗಳ ಜಾಗತಿಕ ಸರಾಸರಿ 5.1% ಆಗಿದ್ದರೆ, ಭಾರತದ ಸರಾಸರಿ 12.4% ಆಗಿರುವುದು ಇನ್ನೊಂದು ವಿಶೇಷ!

ಇದಕ್ಕೂ ಕೆಲವು ದಿನಗಳ ಮೊದಲು, ಅಂದರೆ ಜನವರಿ 5 ರಂದು, ಭಾರತೀಯ ರೈಲ್ವೇಯಲ್ಲಿ ಪೂರ್ತ ಮಹಿಳಾ ಸಿಬ್ಬಂದಿಗಳಿದ್ದ ಒಂದು ಗೂಡ್ಸ್‌ಟ್ರೈನ್ ಚಲಾಯಿಸಿದ ಮಹತ್ವದ ವಿಚಾರವೊಂದು ಹೆಚ್ಚು ಸುದ್ದಿಯಾಗಿರಲಿಲ್ಲ. ಅಂದು ಬೆಳಗ್ಗೆ 11 ಗಂಟೆಗೆ ಮುಂಬೈಯ ವಸಾಯ್ ರೈಲ್ವೇ ನಿಲ್ದಾಣದಿಂದ ಗುಜರಾತಿನ ವಡೋದರಾಕ್ಕೆ ಹೊರಟ ಆ ಸರಕು ರೈಲಿಗೆ ಕುಂಕುಮ್ ಸೂರಜ್ ಡೊಂಗ್ರೆ ಲೋಕೋ ಪೈಲಟ್, ಉದಿತಾ ವರ್ಮ ಸಹ ಲೋಕೋ ಪೈಲಟ್ ಮತ್ತು ಆಕಾಂಕಾ ರಾಯ್ ಗೂಡ್ಸ್ ಗಾರ್ಡ್ ಆಗಿದ್ದರು. ಈ ಕೆಲಸಗಳು ಅಪಾರ ದೈಹಿಕ ಶ್ರಮ, ರಾತ್ರಿ ಹೊತ್ತಿನ ಕೆಲಸ ಮತ್ತು ಬಹುದೂರದ ಪ್ರಯಾಣ ಇತ್ಯಾದಿ ಕಾರಣಗಳಿಂದಾಗಿ ಇವುಗಳು ಈವರೆಗೆ ಸ್ತ್ರೀಯರಿಗೆ ತಕ್ಕುದ್ದಲ್ಲ ಎಂದು ಭಾವಿಸಲಾಗುತ್ತಿತ್ತು.

2018ರ ಒಂದು ವರದಿಯ ಪ್ರಕಾರ ರೈಲ್ವೇ ಡ್ರೈವರ್, ವೆಲ್ಡರ್, ಫಿಟ್ಟರ್, ಮೆಕ್ಯಾನಿಕ್ ಮೊದಲಾದ ಹುದ್ದೆಗಳಿಗೆ 42 ಲಕ್ಷ ಪುರುಷರು ಮತ್ತು 5 ಲಕ್ಷ ಮಹಿಳೆಯರು ಅರ್ಜಿ ಸಲ್ಲಿಸಿದ್ದರು. ರೈಲ್ವೇ ಇಲಾಖೆ ಸುಮಾರು 500 ಮಹಿಳೆಯರನ್ನು ರೈಲ್ವೇ ಡ್ರೈವರ್ ಕೆಲಸಕ್ಕೆ ನೇಮಿಸುವ ಮೂಲಕ ಮುಂದಿನ ದಿನಗಳಲ್ಲಿ ಭಾರತೀಯ ರೈಲುಗಳಲ್ಲಿ ಹೆಚ್ಚು ಹೆಚ್ಚು ಮಹಿಳಾ ಚಾಲಕರನ್ನು ನೋಡಬಹುದು. ಭಾವನಗರ ರೈಲ್ವೇ ವಿಭಾಗದ ಹಲವು ನಿಲ್ದಾಣಗಳಲ್ಲಿ ಅನೇಕ ಮಹಿಳೆಯರು ಈಗಾಗಲೇ ರೈಲ್ವೇ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ.

2017 ರ ಜೂನ್ 5 ರಂದು ಮುಂಬೈಯ ಮಾಟುಂಗಾ ರೈಲ್ವೇ ನಿಲ್ದಾಣದ ಎಲ್ಲಾ ಹುದ್ದೆಗಳನ್ನು ಮಹಿಳೆಯರು ನಿರ್ವಹಿಸುವ ಮೂಲಕ ಇದು ಮಹಿಳೆಯರಿಂದ ನಡೆಸಲ್ಪಡುವ ಭಾರತದ ಪ್ರಪ್ರಥಮ ರೈಲ್ವೇ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಒಟ್ಟು 30 ಜನ ಸಿಬ್ಬಂದಿಗಳನ್ನು ಹೊಂದಿರುವ ಈ ರೈಲ್ವೇ ನಿಲ್ದಾಣದಲ್ಲಿ 14 ಬುಕ್ಕಿಂಗ್ ಕರ್ಕ್‌ಗಳು, 2 ರೈಲ್ವೇ ಪೋಲಿಸ್, 4 ಪಾಯಿಂಟ್ ಪರ್ಸನ್, 7 ಟಿಕೆಟ್‌ಚೆಕ್ಕರ್, 2 ಅನೌನ್ಸರ್ ಮತ್ತು 1 ಸ್ಟೇಷನ್ ಮಾಸ್ಟರ್ ಎಲ್ಲರೂ ಮಹಿಳೆಯರೇ ಆಗಿದ್ದಾರೆ.

ಈಗ ನಗರಗಳಲ್ಲಿ ಮಾತ್ರವಲ್ಲ ಚಿಕ್ಕಪುಟ್ಟ ಊರುಗಳಲ್ಲೂ ಮಹಿಳೆಯರು ಟ್ಯಾಕ್ಸಿ, ರಿಕ್ಷಾ ಚಲಾಯಿಸುವ ದೃಶ್ಯ ತೀರಾ ಸಾಮಾನ್ಯವಾಗುತ್ತಿದೆ. ಕೆಲವೆಡೆ ಮಹಿಳೆಯರು ಬಹುಭಾರದ ಟ್ರಕ್ಕುಗಳನ್ನು ಚಲಾಯಿಸುವುದನ್ನೂ ನೋಡಬಹುದು. ದೆಹಲಿಯಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆಯಲ್ಲಿ ನೂರಾರು ಮಹಿಳೆಯರು ಟ್ರ್ಯಾಕ್ಟರುಗಳನ್ನು ಚಲಾಯಿಸಿ ಭಾಗವಹಿಸಿದ್ದನ್ನು ಇಡೀ ದೇಶವೇ ನೋಡಿತು! ಗುಡಿ ಪಾಡ್ವಾ (ಮರಾಠಿಗರ ಹೊಸ ವರ್ಷ) ದಂದು ಮಹಾರಾಷ್ಟ್ರದ ಸ್ತ್ರೀಯರು ಕಚ್ಚೆ ಸೀರೆ ಉಟ್ಟು, ಬುಲೆಟ್ ಬೈಕುಗಳನ್ನು ಚಲಾಯಿಸುತ್ತ ಮೆರವಣಿಗೆ ಹೋಗುವ ದೃಶ್ಯ ಮನಮೋಹಕವಾದುದು. ಪೂನಾದಲ್ಲಿ ಇತ್ತೀಚೆಗೆ ಪೌರೋಹಿತ್ಯ ಮಾಡುವ ಮಹಿಳಾ ತಂಡಗಳು ಹುಟ್ಟಿಕೊಂಡು ಸುದ್ದಿ ಮಾಡುತ್ತಿವೆ. ಹೀಗೇ, ಮುಂದಿನ ದಿನಗಳಲ್ಲಿ, ಪುರುಷರು ತಮಗೆ ತಾವೇ ಕಟ್ಟಿಕೊಂಡ ಇನ್ನೂ ಹಲವು ಕೋಟೆಗಳಿಗೆ ಮಹಿಳೆಯರು ಸಮಾನ ಆಧಿಪತ್ಯಕ್ಕಾಗಿ ಲಗ್ಗೆ ಹಾಕುವುದರಲ್ಲಿ ಅನುಮಾನವೇ ಇಲ್ಲ,

(ಲೇಖಕರು ಬ್ಯುಸಿನೆಸ್ ಇಂಡಿಯಾ ಪಾಕ್ಷಿಕದ ವ್ಯಂಗ್ಯಚಿತ್ರಕಲಾವಿದರು ಹಾಗೂ ಪತ್ರಕರ್ತರು)

## ಕಾಲಿಲ್ಲದಿದ್ದರೇನಂತೆ.... ಸಾಧಿಸುವ ಛಲವೊಂದೇ ಸಾಕು ಎವರೆಸ್ಟ್ ಏರಲು...

-ರಂಜಿತ್. ಪಿ





ಸಾಧಿಸುವ ಛಲವೊಂದಿದ್ದರೆ ಸಾಕು, ಎಂತಹ ನ್ಯೂನತೆಗಳಿದ್ದರೂ ಅದನ್ನು ಮೆಟ್ಟಿ ನಿಂತು ನಿಶ್ಚಿತ ಗುರಿಯನ್ನು ಸಾಧಿಸಬಹುದು. ಸಾಧನೆಯ ಹಾದಿಯಲ್ಲಿ ಕಷ್ಟ-ನಷ್ಟಗಳು ನೋವುಗಳು ಸರ್ವೇಸಾಧಾರಣ. ಆದರೆ ಅದನ್ನೆಲ್ಲಾ ಹಿಮ್ಮೆಟ್ಟಿಸಿ ಸಾಧನೆಯ ಓಟದಲ್ಲಿ ಗೆಲ್ಲುವವನೇ ನಿಜವಾದ ಸಾಧಕ. ಸಾಧನೆಗೆ ಕಠಿಣ ಪರಿಶ್ರಮ, ಬದ್ಧತೆ ಹಾಗೂ ತಾಳ್ಮೆ ಬಹುಮುಖ್ಯ. ಅದೆಷ್ಟೇ ಬಾರಿ ಸೋತರೂ ಮತ್ತೆ ಮತ್ತೆ ಪ್ರಯತ್ನಿಸಿ ಸಫಲತೆಯನ್ನು ಗಳಿಸಬೇಕು. ಇಂತಹ ಸಾಧಕರ ಉತ್ತುಂಗದ ಶಿಖರದಲ್ಲಿ ನಿಲ್ಲುವವರಲ್ಲಿ ಅರುಣಿಮಾ ಸಿನ್ಹಾ ಅವರೂ ಒಬ್ಬರು. ಅವರು ಸೋತವರ ಬಾಳಿನಲ್ಲಿ ಸ್ಫೂರ್ತಿಯ ಚಿಲುಮೆಯಂತಿರುವವರು. ಒಂದು ಕಾಲನ್ನೂ ಕಳೆದುಕೊಂಡರೂ ವಿಶ್ವದ ಅತ್ಯುನ್ನತ ಶಿಖರ ಮೌಂಟ್ ಎವರೆಸ್ಟನ್ನು ಏರಿದವರು. ಮೌಂಟ್ ಎವರೆಸ್ಟನ್ನು ಏರಿದ ಪ್ರಥಮ ವಿಕಲಾಂಗ ಮಹಿಳೆ.

ಅವರ ಬಗ್ಗೆ ಆಲೋಚಿಸಿದಾಗ ಬಹಳ ಆಶ್ಚರ್ಯವಾಗುತ್ತದೆ. ಎಲ್ಲಾ ಅಂಗಾಂಗಳೂ ಸರಿಯಿದ್ದು ಪರ್ವತಾರೋಹಣ ಕೈಗೊಳ್ಳುವುದು ಕಷ್ಟಕರ, ಅಂಥಾದ್ದರಲ್ಲಿ ಕಾಲನ್ನು ಕಳೆದುಕೊಂಡು ಕೃತಕ ಕಾಲುಗಳಿಂದ ಸುಮಾರು 29,029 ಅಡಿ ಎತ್ತರವಿರುವ ಮೌಂಟ್ ಎವರೆಸ್ಟನ್ನು ಏರುವುದೆಂದರೆ ಅದೊಂದು ಸೋಜಿಗದ ಸಂಗತಿ, ಪರಮಾದ್ಭುತ ! ನಮಗೆಲ್ಲಾ ಗೊತ್ತೇ ಇರುವಂತೆ ಹಿಮಾಲಯ ಜಗತ್ತಿನ ಅತೀ ದೊಡ್ಡ ಹಾಗೂ ಎತ್ತರದ ಪರ್ವತ. ಹೆಸರೇ ಹೇಳುವಂತೆ ಸಂಪೂರ್ಣವಾಗಿ ಹಿಮಾಚ್ಛಾದಿತವಾಗಿರುತ್ತದೆ. ಇನ್ನು ಮೌಂಟ್ ಎವರೆಸ್ಟ್ ಎಂದರೆ ಕೇಳುವುದೇ ಬೇಡ. ಪ್ರಪಂಚದ ಅತ್ಯುನ್ನತ ಶಿಖರ. ಸುಮಾರು 8848 ಮೀಟರ್ ಅಂದರೆ 29,029 ಅಡಿ ಎತ್ತರವಿದ್ದು ಅತೀ ಕಡಿದಾಗಿದೆ.

ಪರ್ವತಾರೋಹಣ !!! ಕೇಳಲು ರೋಮಾಂಚನ. ಆದರೆ ಭಯಾನಕ ಸಾಹಸ. ಬಹು ಪ್ರಯಾಸಕರವಾದ ಸಾಹಸವಾಗಿದ್ದು, ಜೀವಕ್ಕೆ ಸಂಚಕಾರ ತಂದೊಡ್ಡುವ ಸವಾಲುಗಳೇ ಹೆಚ್ಚು. ಕೆಲವೊಮ್ಮೆ ಪ್ರಾಣದ ಆಸೆಯನ್ನೇ ಬಿಡಬೇಕಾಗಿ ಬರಹುದು. ಪರ್ವತಾರೋಹಣ ಸಾಹಸದ ಹಾದಿಯಲ್ಲಿ ಜೀವ ಕಳೆದುಕೊಂಡ ಪರ್ವತಾರೋಹಿಗಳೆಷ್ಟೋ! ಆರೋಹಣ ಮಾಡುವಾಗ ಹಿಮಪ್ರಪಾತ, ಕಂದಕಗಳು, ಕೊರಕಲುಗಳು, ಆಗಾಗ ಬೀಳುವ ಬೃಹತ್ ಹಿಮವೃಷ್ಟಿ ಇವೇ ಮೊದಲಾದ ತೊಂದರೆಗಳು ಸರ್ವೇಸಾಮಾನ್ಯ. ದೇಹದ ಮೂಳೆಗಳನ್ನೇ ಕೊರೆಯುವಂತಹ ಚಳಿ, ಒಗ್ಗದ ವಾತಾವರಣಕ್ಕೆ ಒಗ್ಗದ ಮೈ, ಉಸಿರಾಟದ ತೊಂದರೆ, ನಿಶ್ಯಕ್ತಿ, ಒತ್ತಡ ಇವೆಲ್ಲಾ ಇನ್ನಿತರ ತೊಂದರೆಗಳು. ಆದರೆ ಅರುಣಿಮಾಗೆ ತನ್ನ ಹಿಮಾಲಯವನ್ನೇರುವ ಕನಸಿನ ಹಾಗೂ ಛಲದ ಮುಂದೆ ಇವೆಲ್ಲವೂ ನಗಣ್ಯವೆನಿಸಿತು. ಶಿಖರವನ್ನೇರುವುದೊಂದೇ ಅವರ ಬಹುದೊಡ್ಡ ಗುರಿಯಾಗಿತ್ತು.

ಅರುಣಿಮಾ ಸಿನ್ಹಾ ಜನಿಸಿದ್ದು ಉತ್ತರಪ್ರದೇಶದ ಅಂಬೇಡ್ಕರ್ ನಗರದಲ್ಲಿ. ಜುಲೈ 20, 1989 ರಲ್ಲಿ. ಸಿನ್ಹಾ ಬಾಲ್ಯದಿಂದಲೇ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು. ಸೈಕ್ಲಿಂಗ್, ಫುಟ್ಬಾಲ್ ಹಾಗೂ ವಾಲಿಬಾಲ್ ಆಟಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದರು. ವಾಲಿಬಾಲ್‌ನಲ್ಲಿ ಸತತ ಏಳು ಬಾರಿ ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ ಆಟಗಾರ್ತಿ. ಅವರಿಗೆ ಭಾರತೀಯ ಸೈನ್ಯದ ಪ್ಯಾರಾ ಮಿಲಿಟರಿ ಪಡೆಯಲ್ಲಿ ಕರ್ತವ್ಯ ಮಾಡುವ ಕನಸಿತ್ತು.

ಬದುಕಿನ ತಿರುವಿನ ಘಟನೆ: ಅದೊಂದು ಘಟನೆಯು ಅರುಣಿಮಾರ ಬದುಕಿನ ಘಟ್ಟವನ್ನೇ ಬದಲಿಸಿದ ಮಹತ್ತರ ತಿರುವು. ಸಿಐಸಿಫ್ (ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್) ಉದ್ಯೋಗದ ಆಹ್ವಾನದ ಮೇರೆಗೆ ಪರೀಕ್ಷೆಯನ್ನೆದುರಿಸಲು ಲಕ್ನೋದಿಂದ ದೆಹಲಿಗೆ ರೈಲಿನಲ್ಲಿ ಪ್ರಯಾಣ ಹೊರಟಿದ್ದರು. ಪ್ರಯಾಣದ ಮಧ್ಯೆ ಅವರೊಂದು ತೊಂದರೆಗೆ ಸಿಲುಕಿಕೊಂಡರು. ದರೋಡೆಕೋರರು ಅವರ ಬಂಗಾರದ ಸರ ಹಾಗೂ ಹಣವನ್ನು ದೋಚಿ, ಚಲಿಸುತ್ತಿದ್ದ ರೈಲಿನಿಂದ ರೈಲುಹಳಿಗೆ ತಳ್ಳಿದರು. ರೈಲುಹಳಿಗೆ ಬೀಳುತ್ತಿಂದ್ದಂತೇ ಸಮಾನಾಂತರ ಹಳಿಯಲ್ಲಿ ಬರುತ್ತಿದ್ದ ಇನ್ನೊಂದು ರೈಲು ಅವರ ಕಾಲಿನ ಮೇಲೆಯೇ ಸಾಗಿತು. ತತ್ಪರಿಣಾಮ ಮೊಣಕಾಲಿನ ಕೆಳಗಿನ ಭಾಗವು ಪುಡಿಪುಡಿಯಾಯಿತು. ತೀರಾ ಗಂಭೀರ ಸ್ಥಿಯಲ್ಲಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಅವರನ್ನು ಬದುಕಿಸಲು ಮೊಣಕಾಲಿನ ಕೆಳಭಾಗವನ್ನು ಕತ್ತರಿಸಿ ತೆಗೆಯಬೇಕಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆಲ್ ಇಂಡಿಯಾ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ಗೆ ಸೇರಿಸಲಾಯಿತು. ನಾಲ್ಕು ತಿಂಗಳುಗಳ ಕಾಲ ಸುದೀರ್ಘ ಶುಶ್ರೂಷೆ ನೀಡಲಾಯಿತು. ಅರುಣಿಮಾ ತನಗೊದಗಿದ ದುರ್ವಿಧಿಯನ್ನು ನೆನೆದು ಅಳುತ್ತಾ ಕೂರಲಿಲ್ಲ. ಧೃತಿಗೆಡದೆ ಮನಸ್ಸನ್ನು ಗಟ್ಟಿಮಾಡಿಕೊಂಡರು. ಆ ಸಂದರ್ಭದಲ್ಲೇ ಅವರಿಗೆ ಮೌಂಟ್ ಎವರೆಸ್ಟ್ ಏರುವ ಹುಚ್ಚು ಕನಸೊಂದು ಮೂಡಿತು. ಅವರು ಭಾರತೀಯ ಕ್ರಿಕೆಟಿಗ ಯುವರಾಜ್ ಸಿಂಗ್ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದುದರಿಂದ ಪ್ರೇರಣೆಗೊಂಡಿದ್ದರು. ಅಲ್ಲದೇ ದೂರದರ್ಶನದ ಸ್ಫೂರ್ತಿದಾಯಕ ಕಾರ್ಯಕ್ರಮಗಳಿಂದ ಸ್ಫೂರ್ತಿ ಪಡೆದಿದ್ದರು.

ಅರುಣಿಮಾ ತನ್ನ ಕನಸನ್ನು ಈಡೇರಿಸಲೇಬೇಕೆಂದು ದೃಢನಿಶ್ಚಯ ಮಾಡಿದರು. ಉತ್ತರಕಾಶಿಯ ನೆಹರೂ ಇನ್ಸಿಟ್ಯೂಟ್ ಆಫ್ ಮೌಂಟೇನಿಯರಿಂಗ್‌ನಿಂದ ಪರ್ವತಾರೋಹಣ ತರಬೇತಿ ಪಡೆದರು. ತರಬೇತಿಯ ಸಂದರ್ಭದಲ್ಲಿ ಉತ್ತಮ ಸಾಧನೆ ತೋರಿದರು. ಅವರ ಕುಟುಂಬ ಸದಸ್ಯರು ಅವರಿಗೆ ಪ್ರೋತ್ಸಾಹ ನೀಡಿದರು. ಪ್ರಾಯೋಗಿಕವಾಗಿ ನೇಪಾಳದಲ್ಲಿರುವ ಐಲ್ಯಾಂಡ್ ಶಿಖರ(ಸುಮಾರು 6150 ಅಡಿ ಎತ್ತರ) ವನ್ನು 2012 ರಲ್ಲಿ ಏರಿದರು.

ಮುಂದೆ ನಡೆದದ್ದೆಲ್ಲವೂ ಇತಿಹಾಸ. 2013 ರಲ್ಲಿ ಅರುಣಿಮಾ, ತನ್ನ ಹಿಮಾಲಯವನ್ನೇರುವ ಕನಸನ್ನು ನನಸು ಮಾಡಿದರು. ಸತತ 17 ಗಂಟೆಗಳ ಕಠಿಣ ಪರಿಶ್ರಮದಿಂದ ಪ್ರಾಸ್ಥೆಟಿಕ್ ಕಾಲುಗಳಿಂದಲೇ ಮೌಂಟ್ ಎವರೆಸ್ಟ್‌ನ ತುತ್ತತುದಿಯನ್ನು ತಲುಪಿದರು. ಅಲ್ಲಿಗೆ ಸಿನ್ಹಾ ವಿಶ್ವವೇ ನಿಬ್ಬೆರಗಾಗುವಂತಹ ಮಹಾನ್ ಸಾಧನೆ ಮಾಡಿದರು.

ಉತ್ತರ ಪ್ರದೇಶ ಸರ್ಕಾರ 5 ಕೋಟಿ ರೂಪಾಯಿಗಳ ಬಹುಮಾನ ನೀಡಿತು. ಇದಲ್ಲದೆ ವಿಶ್ವದ ಇನ್ನಿತರ ಎತ್ತರದ ಪರ್ವತ ಶಿಖರಗಳನ್ನೂ ಏರುವ ಕನಸನ್ನು ಕಂಡರು. ಮುಂದೆ ಆಫ್ರಿಕಾದ ಕಿಲಿಮಂಜರೋ, ಯುರೋಪಿನ ಎಲ್ಬ್ರಸ್, ಆಸ್ಟ್ರೇಲಿಯಾದ ಕೊಸಿಯುಸ್ಕೋ, ಅಂರ್ಜೆಂಟಿನಾದ ಅಕಂಕಾಗುವ ಹಾಗೂ ಅಂಟಾರ್ಟಿಕಾದ ಮೌಂಟ್ ವಿನ್ಸನ್ ಪರ್ವತಗಳನ್ನೇರಿ ಸಾಧನೆ ತೋರಿದರು.

ಅರುಣಿಮಾ ಸಾಧನೆಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಅವರನ್ನರಸಿ ಬಂದಿವೆ. ಭಾರತದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಶ್ರೀ ಪ್ರಶಸ್ತಿ 2015 ರಲ್ಲಿ ಅವರಿಗೆ ಲಭಿಸಿತು. ಪರ್ವತಾರೋಹಣ ಸಾಧನೆಗೆ ನೀಡುವ ತೇನ್ ಸಿಂಗ್ ನೋರ್ಗೆ ರಾಷ್ಟ್ರೀಯ ಪ್ರಶಸ್ತಿ, ಫಸ್ಟ್ ಲೇಡಿ ಅವಾರ್ಡ್, ಮಲಾಲ ಪ್ರಶಸ್ತಿ, ರಾಣಿ ಲಕ್ಷ್ಮೀಬಾಯಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಅರುಣಿಮಾ ಸಿನ್ಹಾ ಈಗ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದಾರೆ. ಬಡ ಹಾಗೂ ವಿಭಿನ್ನ ಸಾಮರ್ಥ್ಯದ ಜನರಿಗೆ ಉಚಿತ ಕ್ರೀಡಾ ಅಕಾಡೆಮಿ ತೆರೆದಿದ್ದಾರೆ. ಅದರ ಆರ್ಥಿಕ ಆಧಾರಕ್ಕಾಗಿ ಪ್ರಶಸ್ತಿಗಳು ಹಾಗೂ ಸೆಮಿನಾರ್‌ಗಳ ಮೂಲಕ ಪಡೆಯುತ್ತಿರುವ ಹಣವನ್ನು ವಿನಿಯೋಗಿಸುತ್ತಿದ್ದಾರೆ. ಅಕಾಡೆಮಿಗೆ "ಶಹೀದ್ ಚಂದ್ರಶೇಖರ್ ವಿಕಲಾಂಗ್ ಖೇಲ್ ಅಕಾಡೆಮಿ" ಎಂದು ಹೆಸರಿಟ್ಟಿದ್ದಾರೆ. ಸಿನ್ಹಾರವರು "ಬಾರ್ನ್ ಅಗೈನ್ ಆನ್ ದಿ ಮೌಂಟೈನ್" ಎನ್ನುವ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಅವರ ಬದುಕು ಎಲ್ಲರಿಗೂ ಸ್ಫೂರ್ತಿ ಅಲ್ಲವೇ?

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

# ಪಡಾರು ಬರಹಗಳಲ್ಲಿ ಪಡಿಯೊಡೆದ ಕರಾವಳಿ ತೀರದ ಬದುಕು

-ಕುಮಾರ ಸುಬ್ರಹ್ಮಣ್ಯ

ಪಡಾರು ಮಹಾಬಲೇಶ್ವರ ಭಟ್ಟ... ಈ ಹೆಸರು ಕನ್ನಡದ ಓದುಗರಿಗೆ ಚಿರಪರಿಚಿತ. ಅರವತ್ತುದಶಕಗಳಿಂದ ಅಂಕಣಕಾರರಾಗಿ, ಲೇಖಕರಾಗಿ ಕನ್ನಡ ಸಾರಸತ್ವ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು.

ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆಯಿಂದ ಹಿಡಿದು, ಪ್ರಾದೇಶಿಕ ಮಟ್ಟದ ಸಮಸ್ಯೆ ಪರಿಹಾರಗಳ ಬಗ್ಗೆಯೂ ತಮ್ಮ ವಿಚಾರಧಾರೆ ಹರಿಸಿದವರು. ಕೃಷಿ ಇರಲಿ ರಾಜಕೀಯ ಇರಲಿ ಇವರ ವಿಶ್ಲೇಷಣೆಗಳಿಗೆ ಕನ್ನಡ ಪತ್ರಿಕೋದ್ಯಮದಲ್ಲೇ ವಿಶೇಷ ಮನ್ನಣೆ. ಇವರು ಬರೆದ 'ಮಾರಿ ಬಲೆ ಬೀಸಿತ್ತು' ಕೃತಿ ಕರಾವಳಿ ಮೀನುಗಾರರ ಜೀವನಕ್ಕೆ ಹಿಡಿದ ಕೈಗನ್ನಡಿ.ಇವರ ಎಲ್ಲಾ ಬರವಣಿಗೆಗಳೂ ಕರಾವಳಿಯ ಜನ ಜೀವನದ ಪ್ರತಿಬಿಂಬಗಳೇ ಆಗಿವೆ.

ಕಡಲತಡಿಯ ಭಾರ್ಗವ ಡಾ.ಶಿವರಾಮ ಕಾರಂತರ ಒಡನಾಡಿಯಾಗಿದ್ದ ಪಡಾರು ಮಹಾಬಲೇಶ್ವರ ಭಟ್ಟರು ಮರಿ ಭಟ್ಟ-ಸರಸ್ವತಿ ದಂಪತಿಯ ದ್ವಿತೀಯ ಪುತ್ರನಾಗಿ 5-9-1934ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಮಾದಕಟ್ಟೆ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಆರಂಭಿಸಿದರು. 5ನೇ ತರಗತಿಯನ್ನು ಪರ್ಯಾಂತ ಶಾಲೆಯಲ್ಲಿ ಕಲಿತು ಒಂದು ವರ್ಷ ವಿಟ್ಲದ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಓದಿದರು. 1951ರಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿದರು. ಇಂಟರ್ ಮೀಡಿಯೇಟರ್ ಶಿಕ್ಷಣವನ್ನು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಪೂರೈಸಿದರು. ಕೃಷಿ ಪದವಿ (ಅಗ್ರಿಕಲ್ಚರ್ ಬಿ.ಎಸ್.ಸಿ)ಗಾಗಿ ಧಾರವಾಡ ಕೃಷಿ ವಿಶ್ವ ವಿದ್ಯಾಲಯಕ್ಕೆ ಸೇರಿದರು. ಅನಾರೋಗ್ಯದ ಕಾರಣದಿಂದ ಒಂದು ವರ್ಷದಲ್ಲೇ ವಾಪಾಸಾದರು. ನಂತರ ಸಾಹಿತ್ಯ ಮತ್ತು ಕೃಷಿಯಲ್ಲಿ ತೊಡಗಿಸಿಕೊಂಡು ಹೈಸ್ಕೂಲ್‌ನಲ್ಲಿ ಆರಂಭವಾಗಿದ್ದ ಸಾಹಿತ್ಯಾಸಕ್ತಿಯನ್ನು ಮುಂದುವರಿಸಿದರು.

ಭಿತ್ತಿಪತ್ರಿಕೆಯ ನಂಟು: ಹೈಸ್ಕೂಲಿನಲ್ಲಿದ್ದಾಗ ಶಿಕ್ಷಕರೊಡಗೂಡಿ 'ಕಾಮಧೇನು'ಎಂಬ ಭಿತ್ತಿ ಪತ್ರಿಕೆಯನ್ನು ತಮ್ಮ ಹಸ್ತಾಕ್ಷರಗಳಲ್ಲಿ ಮೂಡಿಸಿದ್ದರು. ಕಡಂಗೋಡ್ಲು ಶಂಕರ ಭಟ್ಟರ ರಾಷ್ಟ್ರ ಮತ ಪತ್ರಿಕೆಯಲ್ಲಿ ಪ್ರಚಲಿತ ಘಟನೆ, ಪುಸ್ತಕದ ಬಗೆಗೆ



ಮಾಹಿತಿ, ವ್ಯಕ್ತಿ ಚಿತ್ರಣಗಳನ್ನು ಪ್ರಕಟಿಸುತ್ತಿದ್ದರು. ಡಾ.ಕಾರಂತರ ವಿಚಾರಗಳನ್ನು ಪ್ರಶ್ನಿಸಿ ಪತ್ರ ಬರೆದು ಅವರ ಸ್ನೇಹ ಸಂಪಾದಿಸಿದರು, ಕಾರಂತರೊಂದಿಗೆ ಉತ್ತಮ ಒಡನಾಟ ಹೊಂದಿದರು.

ಕಾರಂತರೊಡನೆ ರಾಜ್ಯದ ಹಲವು ಜಿಲ್ಲೆಗಳ ಪ್ರಯಾಣ ಬೆಳೆಸಿ ಕನ್ನಡ ಸಾಹಿತ್ಯ ಮತ್ತು ಯಕ್ಷಗಾನ ಕಲೆಯ ಮಾಹಿತಿ ಸಂಗ್ರಹಿಸಿದರು. ಪಾಟೀಲ ಪುಟ್ಟಪ್ಪ ಅವರ ಪತ್ರಿಕೆಯಲ್ಲೂ ಇವರ ಬರಹ ಸರಣಿ ಪ್ರಕಟಗೊಂಡಿರುವುದು ಇವರ ಹೆಗ್ಗಳಿಕೆ. ದೆಹಲಿಯ ಆಕಾಶವಾಣಿಯ 'ನ್ಯಾಷನಲ್ ಪ್ರೋಗ್ರಾಂ'ನಲ್ಲಿ ತುಳು ಭಾಷೆಯ ಹಾಡನ್ನು ಸ್ಥಳೀಯ ಜಾನಪದರಲ್ಲಿ ಹಾಡಿಸಿ ತುಳು ಭಾಷೆಯ ಮಹತ್ವವನ್ನು ರಾಷ್ಟ್ರಮಟ್ಟದಲ್ಲಿನ ಶ್ರೋತೃಗಳಿಗೆ ಕೇಳಿಸಿದ ಹೆಗ್ಗಳಿಕೆ ಇವರದು. ಕನ್ನಡ,ತುಳು, ಮತ್ತು ಹವೀಕ ಭಾಷೆಗಳಲ್ಲಿ ಇವರ ಬರವಣಿಗೆಗಳು ಪ್ರಕಟವಾಗಿವೆ. ತೆಂಕಣ ನಾಡಿನ ತ್ರಿಪದಿ ಹಾಡುಗಳು, ಜಾನಪದ ಸಾಹಿತ್ಯ, ಹೆಮ್ಮಕ್ಕಳ ಹಾಡು, ಬಸುರಿಯ ಹಾಡು, ಚಂದ್ರಾವಳಿ ಹಾಡು, ಪಾರಿಜಾತ ಹಾಡು, ಹೋಲಿಬಾರೆ ನಮ್ಮ ಮನೆ, ಹವೀಕ , ಹಳದಾಡುವ ಹಾಡು, ಮಾರಿ ಬಲೆ ಬೀಸಿತ್ತು ಇತ್ಯಾದಿಗಳು ಇವರ ಪ್ರಸಿದ್ಧ ಬರಹಗಳು

1960ರ ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದ ಕಥಾ ಸ್ಪರ್ಧೆಯಲ್ಲಿ 'ಮಾರಿ ಬಲೆ ಬೀಸಿತ್ತು' ಪ್ರಥಮ ಬಹುಮಾನ ಗಳಿಸಿತು. ಇದು ಕರಾವಳಿಯ ಮೀನು ಹಿಡಿಯುವವರ, ಮೀನು ಮಾರುವ ಹೆಣ್ಣಿನ ಜೀವನದ ಆಗುಹೋಗುಗಳ ಬಗ್ಗೆ ಬೆಳಕು ಚೆಲ್ಲಿತ್ತು.

ಇವರ ಇನ್ನಷ್ಟು ಕಥೆಗಳ ಸಂಗ್ರಹವಾಗಿ ಮಾರಿ ಬಲೆ ಬೀಸಿತ್ತು ಎಂಬ ಕಥಾಸಂಕಲನ ಪ್ರಕಟವಾಯಿತು. ಇವರ ಕಥಾ ಬರವಣಿಗೆ ಕೇವಲ ಪಾತ್ರವಾಗಿರದೆ ಕರಾವಳಿಯ ಮೀನುಗಾರ ಸಮುದಾಯದ ಬದುಕಿನ ಚಿತ್ರಣವಾಗಿತ್ತು.

ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿಗಳ ತುಳು ಭಾಷಾ ಪಠ್ಯ ಪುಸ್ತಕ ಸಿರಿ ದೊಂಪದಲ್ಲಿ 'ಮಾರಿ ಬಲೆ ಬೀಸಿತ್ತು' ಕಥಾ ಸಂಕಲನದ 'ಪುದ್ವರು' ಎಂಬ ಭಾಗವನ್ನು ನೀಡಿದ್ದಾರೆ. ಪಡಾರು ಮಹಾಬಲೇಶ್ವರ ಭಟ್ಟರು ಕೃಷಿ ಹಾಗು ಸಾಹಿತ್ಯದಲ್ಲಿ ತೊಡಗಿ-ಕೊಂಡು ಪತ್ರಿಕೆಯಲ್ಲಿ ಲೇಖನಗಳ ಮೂಲಕ ಪ್ರಚಲಿತ ವಿಚಾರಗಳ ವಿಶ್ಲೇಷಕರಾಗಿರುವ ಹಿರಿಯ ಸಾಹಿತಿಗಳಾಗಿದ್ದಾರೆ.

ದೇಶ ಸುತ್ತಿ ಕೋಶ ಓದು ಅನ್ನುವಂತೆ ತಮ್ಮ ಸುದೀರ್ಘ ಪಯಣದ ಅನುಭವ ಮತ್ತು ಗ್ರಹಿಕೆಗೆ ಸಿಕ್ಕ ಅನುಭಾವಗಳಿಗೆ ಅಕ್ಷರದ ರೂಪ ನೀಡಿರುವ ಅವರ ಅನುಭವಗಳ ಮತ್ತು ಆಲೋಚನಾ ಪ್ರಕ್ರಿಯೆಗಳ ವಿಚಾರಗಳ ಸಂಗ್ರಹವೇ ಅವರ ಬರವಣಿಗೆಯಲ್ಲಿ ಪ್ರತಿಫಲಿತಗೊಂಡಿದೆ.

# ಬರಡಲ್ಲ ಗಣಿತವಿದು....ಹೊಂಗಿಂಡಿ

-ಸುಭಾಷಿನಿ.

"ಲೆಕ್ಕ" ಎಂದರೆ ಪುಸ್ತಕ, ಪೆನ್ನು ಪಕ್ಕಕ್ಕೆ ಇಡುವವರೇ ಜಾಸ್ತಿ. ಬೇರೆಲ್ಲಾ ತರಗತಿಗಳಲ್ಲಿ ತೂಕಡಿಸುತ್ತಾ ಕುಳಿತುಕೊಳ್ಳುವ ಕೆಲ ವಿದ್ಯಾರ್ಥಿಗಳು ಗಣಿತ ತರಗತಿಯಲ್ಲಿ ಕಣ್ಣು ಕಿವಿ ಬಿಟ್ಟು ಎಚ್ಚರವಾಗಿರುತ್ತಾರೆಯಾದರೂ, ಶೇಕಡವಾರು ವಿದ್ಯಾರ್ಥಿಗಳಲ್ಲಿ 'ಗಣಿತ ಕಬ್ಬಿಣದ ಕಡಲೆ' ಎಂಬ ಭಾವನೆಯೇ ಅಧಿಕ. ಪ್ರತಿಯೊಬ್ಬರೂ ಗಣಿತ ಕಷ್ಟ ಎಂಬ ಮನೋಭಾವನೆ ಬೆಳೆಸಿಕೊಂಡಿರುವ ಹಿನ್ನೆಲೆಯಲ್ಲಿ ಬಹುಶಃ ಈಗಿನ ಶಿಕ್ಷಣ ವ್ಯವಸ್ಥೆಯ ಪಾತ್ರ ಮಹತ್ತರವೂ ಆಗಿರಬಹುದು. ಇಂದು ಎಲ್ಲವೂ ವೇಗವಾಗಿ ಆಗಬೇಕು, ಹೀಗಾಗಿ ಬೆರಳತುದಿಯಲ್ಲಿ ವೈಜ್ಞಾನಿಕ ಸಲಕರಣೆಗಳು ಸಿಲುಕಿ ಮೆದುಳು ಎಂಬುದು ಜಿಡ್ಡು ಹಿಡಿದು ಹೋಗಿವೆ. ಬದಲಾಗಿ ಸ್ವಲ್ಪ ಹಿಂದೆ ಹೋಗೋಣ, ಅಲ್ಲಿ ಗಣಿತ ಎಂದರೆ, ಕರಿಹಲಗೆಯ ಮೇಲೆ ಗೀಚಿ-ಗೀಚಿ ಸ್ಮಾರ್ಟ್ ಬೋರ್ಡ್‌ಗಳಲ್ಲಿ ಗಂಟೆಗಟ್ಟಲೆ ವಿವರಿಸುವ ಉದಾಹರಣೆಗಳಲ್ಲ. ಅಲ್ಲಿ ವಿದ್ಯಾರ್ಥಿಯ ಕಾಲು ಬೆರಳುಗಳಿಂದ, ಕೈ ಬೆರಳುಗಳ ಬಳಕೆ-ಯ ಮೋಜಿನ ಗಣಿತ. ಹುಣಸೇ ಬೀಜದ ಲೆಕ್ಕ, ಮಂಜೊಟ್ಟಿ ಕಾಯಿಯ ಲೆಕ್ಕ, ಇನ್ಯಾವುದೋ ಎಲೆಗಳಿಂದಲೂ ಲೆಕ್ಕ. ಇದು ಸಣ್ಣ ಮಕ್ಕಳಿಗಾಯ್ತು ಎಂದೇನೋ ಹೇಳಬಹುದು ಆದರೆ ಈಗಿನ ಕ್ಯಾಲ್ಕುಲೇಟರ್ ಗಣಿತಕ್ಕಿಂತ ಇವುಗಳೇ ಅತ್ಯಂತ ಸುಲಭ ಮತ್ತು ಉಲ್ಲಾಸದಾಯಕ. ನೀವೇ ನೋಡಿ ಬೇರೆಲ್ಲಾ ವಿಷಯಗಳಿಗಿಂತ 'ಗಣಿತ' ಅತ್ಯಂತ ಭಿನ್ನ. ಕಾರಣ?!-ಕಾರಣ, ಗಣಿತ ಮನಸ್ಸನ್ನು ಮುದಗೊಳಿಸಿ, ಮಾನಸಿಕ ಸಂತೋಷವನ್ನು ಕೊಟ್ಟು ವಿಕಸಿಸುವಂತಹದು. ಆದರೆ ನಾವು ಆ ಮಾರ್ಗವನ್ನು ಕಂಡುಕೊಂಡಿಲ್ಲ ಹಾಗಾಗಿ ನಮಗೆ ತಿಳಿದಿಲ್ಲ. ಬೀಜಗಣಿತದಲ್ಲಿ ಬರುವ **x,y,z** ಗಳ ಪರಿಚಯವಷ್ಟೇ ಇರುವ ನಾವು, ಬೀಜಗಳಿಂದಲೂ ಗಣಿತ ಕಲಿಯಬಹುದು ಎಂಬ ಕಲ್ಪನೆ ಇಲ್ಲದಕ್ಕಾಗಿ ಏನೋ ನಾವಿಂದು ಗಣಿತ ಕಷ್ಟವೆಂದು ಸೋತು ಕುಳಿತಿದ್ದೇವೆ. ಹಾಗಾದರೆ ನೀವೇ ಒಮ್ಮೆ ಯೋಚಿಸಿ, ನಮಗೆ ಒಂದರಿಂದ ನೂರು, ಸಾವಿರ, ಲಕ್ಷ, ಕೋಟಿಗಳ ವರೆಗೆ ಅಂಕೆ-ಸಂಖ್ಯೆಗಳು ಗೊತ್ತಿದೆ ಎಂದ ಮೇಲೆ, ಗಣಿತದಲ್ಲಿರುವುದು ಕೂಡ ಅದೇ ಸಂಖ್ಯೆಗಳು ತಾನೇ, ಏನೇ ಬಂದರೂ ಅದರೊಳಗೆ ಇರಬೇಕು. ಹಾಗಾದರೆ ಗಣಿತ ಕಷ್ಟವಾಗಲಾದರೂ ಹೇಗೆ ಸಾಧ್ಯ!!??.



### ಮೆದುಳಿಗೊಂದು ಮೇವು

ಇಲ್ಲಿದೆ ನಿಮ್ಮ ಮೆದುಳಿಗೊಂದು ಮೇವು. A ಎನ್ನುವ ಬಡ ವ್ಯಕ್ತಿಗೆ **X,Y,Z** ಎನ್ನುವ ಬಾಲ್ಯ ಸ್ನೇಹಿತರಾದ ಮೂವರು ಈ ಮೂವರು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ ಅಕ್ಕ ಪಕ್ಕದ ಬಂಗಲೆಗಳಲ್ಲಿ ವಾಸವಾಗಿರುತ್ತಾರೆ. ಮೂವರು ಸ್ನೇಹಿತರ ಮನೆಗಳಿಗೂ ಕಾಂಪೌಂಡ್ ಇದ್ದು ಪ್ರತಿ ಮನೆಗೂ ಎರಡು ಗೇಟ್ ಗಳಿದ್ದು ಪ್ರತಿಗೇಟ್ ಗಳಲ್ಲಿ ಒಬ್ಬೊಬ್ಬ ಘೂರ್ಖ ಸೆಕ್ಯುರಿಟಿ ಇದ್ದು ಅವರನ್ನು **X1-X2-Y1-2-Z1-Z2** ಎಂದು ಗುರುತಿಸೋಣ. A ತನ್ನಮೊದಲ ಸ್ನೇಹಿತ X ನನ್ನು ಭೇಟಿಯಾಗುವ ಮೊದಲುಗೇಟ್ 1 ರಲ್ಲಿರುವ ಘೂರ್ಖ X1 ಗೆ ಒಂದಷ್ಟು ನಿರ್ದಿಷ್ಟ ಹಣ ನೀಡಿ X ನನ್ನು ನೋಡಲು ಒಳ ಹೋಗುತ್ತಾನೆ. ಭೇಟಿಯ ನಂತರ ಸ್ನೇಹಿತ X, A ಬಳಿ ಇರುವ ಹಣದ ಮೊಬಲಗನ್ನು ದುಪ್ಪಟ್ಟುಗೊಳಿಸುತ್ತಾನೆ. ನಂತರ ಹೊರಬಂದು ಹೊರ ಗೇಟಿನಲ್ಲಿರುವ ಘೂರ್ಖ X 2 ಗೆ ಮೊದಲ ಘೂರ್ಖ X1ನಿಗೆ ಕೊಟ್ಟಷ್ಟೇ ಹಣವನ್ನು ಅವನಿಗೂ ಕೊಡುತ್ತಾನೆ ಹಾಗೆಯೇ ಮುಂದುವರಿದು ಎರಡನೇ ಸ್ನೇಹಿತ Y ಅನ್ನು ಕಾಣುವ ಮೊದಲು ಒಳ ಗೇಟಿನಲ್ಲಿರುವ ಘೂರ್ಖ Y1 ಗೆ ಮೊದಲ ಘೂರ್ಖಗಳಿಗೆ ಕೊಟ್ಟಷ್ಟೇ ಹಣವನ್ನು ನೀಡುತ್ತಾನೆ. ಮತ್ತೆ ಸ್ನೇಹಿತ A, Y ಅನ್ನು ಹಣವನ್ನು ದುಪ್ಪಟ್ಟುಗೊಳಿಸುತ್ತಾನೆ. ಇದು ಮತ್ತೆ ಮೂರನೇ ಸ್ನೇಹಿತನ ಬಳಿಯೂ ಪುನರಾವರ್ತನೆಯಾಗುತ್ತದೆ. ಮೂವರನ್ನು ಭೇಟಿಯಾಗಿ ಎಲ್ಲಾ ಘೂರ್ಖಗಳಿಗೂ ಸಮವಾಗಿ ಹಣ ನೀಡಿ ಹೊರಬರುವ A ಬಳಿ ಯಾವುದೇ ಹಣ ಉಳಿದಿರುವುದಿಲ್ಲ. ಹಾಗಾದರೆ ಮೊದಲ ಸ್ನೇಹಿತನನ್ನು ಭೇಟಿಯಾಗುವ ಮೊದಲು A ಬಳಿ ಇದ್ದ ಹಣವೆಷ್ಟು ?

ಸರಿ ಉತ್ತರಕ್ಕೆ ಸೂಕ್ತ ಗಿಫ್ಟ್ ದೊರೆಯುತ್ತದೆ. ಒಂದಕ್ಕಿಂತ ಹೆಚ್ಚು ಸರಿ ಉತ್ತರಗಳಿದ್ದಲ್ಲಿ ವಿಜೇತರನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು. ಸರಿ ಉತ್ತರ ಕಳುಹಿಸುವ ವಿಳಾಸ:


**auditionmcj401@gmai.com**

# ಮನಸಿನಂಗಳದಿ ನೆನಪುಗಳ ಕುಂಟಾಬಿಲ್ಲೆ....

-ರಾಜೇಶ್. ಜಿ.

ಅಜ್ಜ-ಅಜ್ಜಿಯರ ಮನೆ ಎಂದ-ರೆ ಎಲ್ಲರಿಗೂ ಬಹಳ ಸಂತೋಷ ಆದ-ರೆ ನನಗೆ ನನ್ನಜ್ಜಿಯ ಮನೆ ನನ್ನ ಜೀವವೇ ಆಗಿತ್ತು. ಏಕೆಂದರೆ ನನ್ನ ಬಾಲ್ಯದ ಆರು ವರ್ಷ ಕಳೆದದ್ದೇ ನನ್ನಜ್ಜ ಅಜ್ಜಿಯ ಮನೆಯಲ್ಲಿ. ಹಾಗಾಗಿ ನನ್ನಜ್ಜಿ ನನ್ನಮ್ಮನಿಗಿಂತಲೂ ಒಂದರೆಪಾವು ಪ್ರೀತಿ ಜಾಸ್ತಿಯೇ. ನನ್ನಜ್ಜಿಗೂ ನಾನೆಂದರೆ ಅಷ್ಟೇ ಪ್ರೀತಿ. ನನ್ನ ಆರು ವರ್ಷಗಳ ನಂತರ ಮತ್ತೆ ನನ್ನಮ್ಮನ ಮಡಿಲಿಗೆ ಬಂದೆ. ಆದರೂ ಕೂಡ ಅಲ್ಲಿನ, ಆ ದಿನಗಳ ನೆನಪು ಇಂದಿಗೂ ಮನದಲ್ಲಿ ಹಸಿರ ಹೂದೋಟದ ರಾಜಾ ಸೀಟು. ಅಜ್ಜಿಯ ಮನೆಗೆ ಹೋಗಲು ರಜೆ ಬರುವುದನ್ನೇ ಕಾಯುತ್ತಿದ್ದ ನಾನು ಬೇಸಿಗೆ ರಜೆಯಲ್ಲಿ ಅಜ್ಜಿಯ ಮನೆಗೆ ಹೋಗಿ ಕಾಲ ಕಳೆಯುತ್ತ ಇದ್ದೆ.

ಇನ್ನು ಅಜ್ಜನೊಂದಿಗೆ ಸಂತೆಗೆ ಹೋಗುವುದು ಎಂದರೆ ಎಲ್ಲಿಲ್ಲದ ಸಂತೋಷ. ನಂತರ ಅಜ್ಜಿಯೊಂದಿಗೆ ಮಾತನಾಡುತ್ತ ಆಟವಾಡುತ್ತ ಕಾಲ ಕಳೆಯುತ್ತಿದ್ದೆ. ಇದೆ. ಅಜ್ಜನ ಮನೆ ನೋಡಲು ಬಹಳ ವಿಶಾಲವಾಗಿದ್ದು ಹತ್ತಿಪ್ಪತ್ತು ಮಂದಿ ಉಳಿದುಕೊಳ್ಳುವಷ್ಟು ದೊಡ್ಡದಿತ್ತು. ಮನೆಗೆ ಅಂಟಿಕೊಂಡಂತೆ ಕೊಟ್ಟಿಗೆ ಇತ್ತು. ಅದರಲ್ಲಿ ಬಣ್ಣ ಬಣ್ಣದ ಕೋಳಿಗಳು. ಅಯ್ಯೋ ಅದನ್ನಂತೂ ಮರೆಯಲು ಸಾಧ್ಯವೇ ಇಲ್ಲ.



ಅಜ್ಜನಿಗೆ ಕೋಳಿಗಳು ಎಂದರೆ ಪಂಚಪ್ರಾಣ. ತನಗೆ ಊಟವಿಲ್ಲದಿದ್ದರು ಪರಾವಾಗಿಲ್ಲ ಆದ-ರೆ ಕೋಳಿಗಳಿಗೆ ಕಾಳು ಹಾಕಲೇ ಬೇಕು. ಇನ್ನು ಇವುಗಳ ರಕ್ಷಣೆಗೆ ನಾಯಿಯನ್ನು ಬೇರೆ ಸಾಕಿದ್ದರು. ಅಜ್ಜನ ಮನೆಗೆ ಬರುವವರು ನಾಯಿ ಕಟ್ಟಿದ್ದೀರ ಎಂದು ಕೇಳಿ ಮನೆಯ ಒಳಗೆ ಬರುವುದು ವಾಡಿಕೆಯಾಗಿತ್ತು. ಇದು ಅಜ್ಜನ ಪ್ರೀತಿ ಪಾತ್ರ ಪ್ರಾಣಿಗಳಾದರೆ ಇನ್ನೂ ಅಜ್ಜಿಗೆ ಬೆಕ್ಕುಗಳೆಂದರೆ ಒಂದಷ್ಟು ಹೆಚ್ಚಿನ ಮುಚ್ಚಟ್ಟೆ. ಮೇಡಂ ಮತ್ತು ಕುಚ್ಚು ಎಂಬ ಎರಡು ಬೆಕ್ಕುಗಳು ಮನೆಯ ಯಾಜಮಾನಿಕೆಯನ್ನು ವಹಿಸಿಕೊಂಡ ಗಾಂಭಿರ್ಯದಿಂದ ಆಸೀನವಾಗಿರುತ್ತಿದ್ದವು. ಮನೆಯ ತುಂಬಾ ಅವುಗಳ ರಾಜ ನಡೆ. ನನಗಂತೂ ಈ ಎಲ್ಲಾ ಪ್ರಾಣಿಗಳೊಂದಿಗೆ ಆಡುವ ಹುಚ್ಚು.

ನಾನು ಅಜ್ಜನ ಮನೆಗೆ ಹೋದರೆ ಸಾಕು. ಅಲ್ಲೊಂದು ಕೋಳಿ ಖಾಲಿಯಾಗುವುದಂತೂ ಗ್ಯಾರಂಟಿ. ಏಕೆಂದರೆ ನಾಟಿ ಕೋಳಿ ಸಾರು ಅಜ್ಜಿ ಮಾಡಿದ ಕಡಬು ಆಹಾ..! ಈಗಲೂ ನೆನೆದರೆ ಬಾಯಲ್ಲಿ ನೀರೂರುತ್ತದೆ. ಅಷ್ಟಾಗಿಯು ಆ ಮನೆಯಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ಆಗಿಂದಾಗ ನನ್ನ ಅಜ್ಜ ಹೇಳುತ್ತಿದ್ದರು ಈ ಮನೆಯನ್ನು ಬೇರೆ ಯಾರು ಕಟ್ಟಿಲ್ಲ 'ನಾನು ಮತ್ತು ನನ್ನ ಐದು ಜನ ಮಕ್ಕಳು ಸೇರಿ ಈ ಮನೆಯನ್ನು ಕಟ್ಟಿದ್ದು' ಅಜ್ಜನ ಈ ಮಾತುಗಳು ಇಂದಿಗೂ ಕಿವಿಯಲ್ಲಿ ಅನುರಣಿಸುತ್ತಾ ಇರುತ್ತದೆ.

ಒಮ್ಮೆ ಅಜ್ಜನೊಂದಿಗೆ ಉದ್ದದ ಕೋಲಿಗೆ ಕತ್ತಿ ಕಟ್ಟಿ ಎಳನೀರು ಕೊಯ್ಯುವಾಗ ಕತ್ತಿ ಮರದಲ್ಲೆ ಉಳಿಯಿತು. ಆದರೆ ಎಳನೀರು ಸಿಗಲಿಲ್ಲ. ಕತ್ತಿ ಸಿಗದಿದ್ದ ಕಾರಣ ಅಜ್ಜಿಯ ಕೈಯಿಂದ ಪೆಟ್ಟು ತಿಂದದ್ದು ಇದೆ. ಆದರೀಗ ಇವೆಲ್ಲವು ಕೇವಲ ನೆನಪು ಮಾತ್ರ. ಅಜ್ಜನ ಮನೆಯಿದ್ದ ಜಾಗದಲ್ಲಿ ಮನೆಯಿಲ್ಲ, ಅಲ್ಲಿದ್ದ ಹಣ್ಣಿನ ಮರಗಳಿಲ್ಲ, ಅದೀಗ ಕೇವಲ ಬಟಾ ಬಯಲಿನ ಬೋಳು ಮೈದಾನದಂತೆ ಕಾಣುತ್ತಿದೆ. ಅಲ್ಲಿ ಕಳೆದ ಕ್ಷಣ ಬರಿ ನೆನಪಲ್ಲ ಕಳೆದು ಹೋದ ಅತ್ಯಮೂಲ್ಯ ಸಂತೋಷ. ನೆನೆದಾಗಲೆಲ್ಲಾ ಮನದಂಗಳದಿ ನೆನಪುಗಳ ಕುಂಟಾಬಿಲ್ಲೆ.

# ಗ್ರೇಡ್ ಅಪ್ ಆ್ಯಪ್ (ಗ್ರೇಡ್ ಸ್ಟಾಕ್ ಲರ್ನಿಂಗ್ ಪ್ರೈವೆಟ್ ಲಿಮಿಟೆಡ್)

ಇತ್ತೀಚಿನ ದಿನಗಳಲ್ಲಿ ಆನ್ ಲೈನ್ ಕಲಿಕೆಗಳ ಪರಿಧಿ ಅಗಾಧವಾಗಿ ವಿಸ್ತೃತಗೊಳ್ಳುತ್ತಾ ಬೆಳೆಯುತ್ತಿವೆ. ಹಾಗೆಯೇ ಜಗತ್ತನ್ನು ಕಾಡಿದ ಕೊರೋನಾದ ಕರಿ ನೆರಳ ಕಾಲಘಟ್ಟದ ನಡುವೆಯೇ ಸ್ಪರ್ಧಾತ್ಮಕ ಪರೀಕ್ಷೆಗಳ ಮಹಾಪೂರವು ಹೆಚ್ಚಾಗಿವೆ. ಹಾಗಾಗಿ ಭಾವಿ ಭವಿಷ್ಯದ ಕನಸುಗಳ ಕನವರಿಕೆಯಲ್ಲಿರುವ ನಿರುದ್ಯೋಗಿ ಯುವ ಜನಾಂಗವನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನೆದುರಿಸಲು ಸಜ್ಜಾಗುವಂತೆ ಮಾಡಲು ಲಭ್ಯವಿರುವ ಉತ್ತಮ ಆನ್ ಲೈನ್ ಆ್ಯಪ್ ಎಂದರೆ ಗ್ರೇಡ್ ಅಪ್ ಆ್ಯಪ್. 2015 ರಲ್ಲಿ ಅಭಿವೃದ್ಧಿ ಪಡಿಸಲಾದ ಈ ಆ್ಯಪ್ ಟೈಮ್ಸ್ ಇಂಟರ್ನೆಟ್ ಒಡೆತನಕ್ಕೆ ಒಳಪಟ್ಟಿದೆ. ಈ ಆ್ಯಪ್ ಸ್ಪರ್ಧಾತ್ಮಕ ಪರೀಕ್ಷೆಗಳಾದ ಬ್ಯಾಂಕಿಂಗ್, ಯುಜಿಸಿ ನೆಟ್, ಸಿಎಸ್ಐಆರ್ ನೆಟ್ ಮುಂತಾದವುಗಳನ್ನು ಆತ್ಮ ವಿಶ್ವಾಸದಿಂದ ಎದುರಿಸಲು ಸಾಧ್ಯವಾಗುವಂತಹ ಉನ್ನತ ಮಟ್ಟದ ತರಬೇತಿಯನ್ನು ಪಡೆದುಕೊಳ್ಳಲು ನೆರವಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ವಿಶಾಲವಾದ ಪೂರ್ವ ಸಿದ್ಧತಾ ತರಬೇತಿಗೆ ಅನುವಾಗುವ ಆ್ಯಪ್ ಇದಾಗಿದ್ದು ಸುಮಾರು 1 ಕೋಟಿ ಭಾರತೀಯ ಪರೀಕ್ಷಾ ಆಕಾಂಕ್ಷಿಗಳು ಗ್ರೇಡ್ ಆ್ಯಪ್ ಮೂಲಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದಾರೆ. ಸುಸಜ್ಜಿತ ಡಿಜಿಟಲ್ ಸೆಟ್ ಅಪ್ ನೊಂದಿಗೆ ಆನ್ಲೈನ್ ಮೂಲಕ ಅರ್ಹ ಮಾರ್ಗದರ್ಶಕರಿಂದ



ಎಸ್ ಎಸ್ ಸಿ, ಬ್ಯಾಂಕಿಂಗ್, ರೈಲ್ವೆ, ಬೋಧನೆ, ಜೆಇಇ, ಜಿಎಟಿಎ, ನೀಟ್, ಯುಪಿಎಸ್‌ಸಿ ಪರೀಕ್ಷೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದು ಬಳಕೆದಾರರ ಅನುಮಾನಗಳನ್ನು ಒಟ್ಟಾಗಿ ಬಗೆಹರಿಸಲು ಅನುವುಮಾಡಿಕೊಡುತ್ತದೆ. ಇದರೊಂದಿಗೆ ರಸಪ್ರಶ್ನೆಗಳು, ಅಣಕು ಪರೀಕ್ಷೆಗಳ ಮೂಲಕ ಪರಸ್ಪರರೊಡನೆ ಕಲಿಯಲು ಮತ್ತು ಸ್ಪರ್ಧಿಸುವ ಅವಕಾಶವನ್ನು ಒದಗಿಸಿ ಕೊಡುವುದರ ಮೂಲಕ ನಿರಂತರ ಕಲಿಕೆ ಮತ್ತು ದಿನ ನಿತ್ಯವೂ ಕಲಿಕಾ ಗುಣಮಟ್ಟದ ಗ್ರಹಿಕೆಯನ್ನು ಸುಧಾರಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

## ಪ್ರತಿಭಾಸೆಲೆ

# ಕೊಮೆ ಸುಪ್ರೀತಾ ವೈದ್ಯ
## ಭರತ ನಾಟ್ಯದಲ್ಲಂಕುರಗೊಂಡ ಲಾಸ್ಯ- ಲಾವಣ್ಯ

-ಭವ್ಯಶ್ರೀ ಎಸ್



ಭಾವ, ರಾಗ, ತಾಳಗಳನ್ನು ಸಮರಸವಾಗಿ ಮಿಳಿತಗೊಳಿಸಿಕೊಂಡು ಅಂತರಂಗದ ಭಾವಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುವ ಲಾಸ್ಯ ಲೇಪಿತ ಅಂಗಿಕಾಭಿನಯದ ನೃತ್ಯ ಪ್ರಕಾರ ಭರತ ನಾಟ್ಯ. ಈ ಸಾಂಪ್ರದಾಯಿಕ ಸಂಕೀರ್ಣ ನೃತ್ಯ ಪ್ರಕಾರವನ್ನು ಕರಗತಗೊಳಿಸಿಕೊಂಡು ಅವುಗಳಲ್ಲಿಯೇ ವಿಭಿನ್ನ ರೀತಿಯ ಪ್ರಯೋಗಗಳೊಂದಿಗೆ ನೃತ್ಯ ಪ್ರಕಾರದಲ್ಲೊಂದು ಹೊಸ ಆಯಾಮವನ್ನು ಕಂಡುಕೊಳ್ಳುವ ನಿರಂತರ ಪ್ರಯೋಗದಲ್ಲಿದ್ದಾರೆ ಕೊಮೆ ಸುಪ್ರೀತಾ ವೈದ್ಯ.

ಕುಂದಾಪುರದ ಕೊಮೆ ಪುಷ್ಪಲತಾ ವೈದ್ಯ ಮತ್ತು ಸುಧೀಂದ್ರಾ ವೈದ್ಯ ದಂಪತಿಗಳ ಪುತ್ರಿಯಾಗಿರುವ ಇವರು ತನ್ನ ಬಾಲ್ಯದಲ್ಲಿಯೇ ಭರತನಾಟ್ಯ ಕಲಿಕೆಯನ್ನು ಆರಂಭಿಸಿದ್ದು, ಗುರು ವಿದೂಷಿ ಪ್ರವಿತಾ ಅಶೋಕ್ ಅವರ ಮಾರ್ಗದರ್ಶನದಲ್ಲಿ ವಿದ್ವತ್ ಪರೀಕ್ಷೆಯನ್ನು ಪೂರ್ಣಗೊಳಿಸಿ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಮಿಂಚುತ್ತಿರುವ ಈಕೆಯ ಸಾಧನೆಯ ಕಿರುಪರಿಚಯ ಈ ಕೆಳಗಿನಂತೆ.

ಹೆಜ್ಜೆ-ಗೆಜ್ಜೆ ನೃತ್ಯ ಸಂಸ್ಥೆ ನಡೆಸಿದ ರಾಷ್ಟ್ರಮಟ್ಟದ ಭರತನಾಟ್ಯ ಸ್ಪರ್ಧೆಯಲ್ಲಿ ಪ್ರಥಮದೊಂದಿಗೆ ನಾಟ್ಯ ಕೌಸ್ತುಭ' ಪ್ರಶಸ್ತಿ, ಗೋಪಿನಾಥ ದಾಸ್ ನ್ಯಾಸ ಬೆಂಗಳೂರು (ರಿ.) ಸಂಸ್ಥೆ ನಡೆಸಿದ ರಾಷ್ಟ್ರಮಟ್ಟದ ಭರತನಾಟ್ಯ ಸ್ಥರ್ಧೆಯಲ್ಲಿ ದ್ವಿತೀಯ ಸ್ಥಾನ. ಮಂಗಳೂರು ವಿ.ವಿ. ಅಂತರ್ ಕಾಲೇಜ್ ಮಟ್ಟದ ಭರತನಾಟ್ಯ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ.



ಇನ್ನು 2018 ರಲ್ಲಿ ನಡೆದ ಉಡುಪಿ ಜಿಲ್ಲಾ ಮಟ್ಟದ ಯುವ ಜನೋತ್ಸವದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡ ಇವರು ಅದೇ ವರ್ಷ ತುಮಕೂರಿನಲ್ಲಿ ನಡೆದ ರಾಜ್ಯಮಟ್ಟದ ಯುವ ಜನೋತ್ಸವದಲ್ಲಿ ರಾಷ್ಟ್ರಮಟ್ಟಕ್ಕೆ ಅಯ್ಕೆಯಾಗುವುದರ ಜೊತೆಗೆ ಅನೇಕ ಪ್ರಶಸ್ತಿಗಳಿಗೆ ಪಾತ್ರರಾದ ಹಿರಿಮೆ ಇವರದು. ತನ್ನ ನೃತ್ಯ ಸಂಸ್ಥೆಯ ಮೂಲಕ ಈಗಲೂ ಹಲವಾರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ.

ಗುರು ವಿದೂಷಿ ಪ್ರವಿತಾ ಅಶೋಕ್ ಅವರ ಮೆಚ್ಚಿನ ಶಿಷ್ಯೆಯಾಗಿರುವ ಇವರು ಗುರುವೇ ತನ್ನ ಆದರ್ಶ ವ್ಯಕ್ತಿ ಎಂದು ತನ್ನ ವಿನಯ ಪೂರ್ವಕವಾಗಿ ನೆನೆದುಕೊಳ್ಳುತ್ತಾರೆ. ತನ್ನ ಗುರುವಿನ ಆದರ್ಶ ಮಾರ್ಗದರ್ಶನದ ಆಶಯದಂತೆ, ತಾನೇ ಒಂದು ಭರತನಾಟ್ಯ ಕಲಾ ಕೇಂದ್ರವನ್ನು ಸ್ಥಾಪನೆ ಮಾಡಿ ಅಲ್ಲಿ ಗ್ರಾಮೀಣ ಪ್ರತಿಭೆಗಳಿಗೆ ಉಚಿತ ತರಬೇತಿ ನೀಡುವ ಬಹುದೊಡ್ಡ ಕನಸನ್ನು ಹೊಂದಿರುವ ಸುಪ್ರೀತಾ ವೈದ್ಯ ಅವರು ಕುಂದಾಪುರದ ನೃತ್ಯ ವಸಂತ ನಾಟ್ಯಾಲಯದ ವಿದ್ಯಾರ್ಥಿನಿಯಾಗಿದ್ದಾರೆ. ಭರತ ನಾಟ್ಯದ ವಿದ್ವತ್ ಪೂರ್ವ ಪರೀಕ್ಷೆಯನ್ನು ಪೂರ್ಣಗೊಳಿಸಿ ಉಡುಪಿ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಗಳಿಸಿಕೊಂಡಿರುತ್ತಾರೆ.

ಈವರೆಗೂ ಇವರು ಸುಮಾರು 250 ಕ್ಕೂ ಹೆಚ್ಚಿನ ಕಾರ್ಯಕ್ರಮ ನೀಡಿರುವ ಅದಮ್ಯ ಪ್ರತಿಭೆ ತನ್ನ ವೈವಿಧ್ಯಮಯ ಚಟುವಟಿಕೆಗಳಿಂದ ನಾಟ್ಯರಂಗದಲ್ಲಿ ಮುನ್ನಡೆಯುತ್ತಿರುವ ಅಪ್ರತಿಮ ನಾಟ್ಯಗಾರ್ತಿಯಾದ ಇವರು ಪ್ರಸ್ತುತ ಮಂಗಳೂರು ವಿ.ವಿ.ಯ ಕೆಮೆಸ್ಟ್ರಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರ ಭಾವಿ ಭವಿಷ್ಯ ಉಜ್ವಲವಾಗಲಿ ಎಂದು ಮಾಧ್ಯಮ ಮಂಗಳ ಆಶಿಸುತ್ತದೆ.

## ಹನಿಗವನ



### ವೇಷ...

ಬಣ್ಣ ಹಾಕಿದಾಗ ಒಂದು ವೇಷ...
ಬಣ್ಣ ಕಳಚಿದಾಗ ಒಂದು ವೇಷ...
ನಿಜವಾದ ಬಣ್ಣದೊಂದಿಗೆ
ಜೀವಿಸುವುದು ಮತ್ತೊಂದು ವೇಷ....
ಮುಖವಾಡಗಳ ಜಗತ್ತ ಹಿಂದೆ
ಮಾನಸಿಕ ವಿಕಾರಗಳ ನಾನಾ ವೇಷ......
ಇದುವೇ ಈ ಜಗದ ಛದ್ಮ ವೇಷ
ಬೆರೆತ ಬಾಳಿನ ನಡುವೆ ಲಾಭ ನಷ್ಟಗಳ
ಮೀನಾ ಮೇಷ...
ತೋರಿಕೆಯ ವಿಶ್ವಾಸದಲ್ಲೂ ಮಾರು ವೇಷ.....
ಇದಿಂದಿನ ರಂಗಿನಾಟ
ಉಳಿವ ರಂಗದೋಕುಳಿಯಲ್ಲಿ
ಬಣ್ಣಗೆಟ್ಟ ರಂಗುಗಳ ಚಿತ್ತಾರ
ಇದು ಬದುಕ ವಾಸ್ತವಗಳ ಅವಶೇಷ...

-ಶರಣ್ಯ ಕುಮಾರಿ ಕೆ.

## ನಿಮಗಿದು ಗೊತ್ತೇ?

### ಶಸ್ತ್ರ ಚಿಕಿತ್ಸೆಯ ಉಡುಪುಗಳು ಏಕೆ ಹಸಿರಾಗಿರುತ್ತವೆ ?

ಶಸ್ತ್ರ ಚಿಕಿತ್ಸೆಯಲ್ಲಿ ತೊಡಗುವ ಸರ್ಜನ್ ಮತ್ತು ನರ್ಸ್‌ಗಳ ಹೊರ ಉಡುಪು ಮೊದಲಿಗೆ ಶುಭ್ರತೆಯ ಸಂಕೇತವಾಗಿ ಅಪ್ಪಟ ಬಿಳಿ ಬಣ್ಣದ್ದಾಗಿರುತ್ತಿತ್ತು. ಈಗ ಅದರ ಬಣ್ಣ ಹಸಿರು ಅಥವಾ ನೀಲಿಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕೊಯ್ದ ದೇಹದೊಳಗಿನ ಕೆಂಪು ಬಣ್ಣವೇ ಸರ್ಜನ್ ಕಣ್ಣನ್ನು ತುಂಬಿಕೊಂಡಿರುವಾಗ ಆಗಾಗ್ಗೆ ಅಕ್ಕ ಪಕ್ಕದಲ್ಲಿ ಹಸಿರು ಅಥವಾ ನೀಲಿ ಬಣ್ಣ ನೋಡಿದರೆ ಕಣ್ಣಿಗೆ ಮತ್ತು ಮನಸ್ಸಿಗೆ ತಂಪು ಸಿಗುತ್ತದೆ. ಇಷ್ಟೆ ಅಲ್ಲದೇ ದೇಹದೊಳಗಿನ ವಿವಿಧ ಕೆಂಪುಗಳ ಸಣ್ಣ ಪುಟ್ಟ ಅಂಗಾಂಗಳು ಹೆಚ್ಚು ಸ್ಪಷ್ಟವಾಗಿ ಬೇರೆ ಬೇರೆ-ಯಾಗಿ ಕಾಣುತ್ತವೆ.ಹೊರ ಉಡುಪು ಬಿಳಿಯಾಗಿದ್ದರೆ ಕೆಲವರಿಗೆ ಕೆಂಪು ರಕ್ತವನ್ನು ನೋಡಿದ ಮೇಲೆ ಬಿಳಿ ಬಣ್ಣ ನೋಡಿದರೆ ಬಿಳಿಯ ಮೇಲೆ ಹಸಿರು ಬಣ್ಣದ ನೆರಳುಗಳು ಕಾಣತೊಡಗುತ್ತವೆ.ಉಡುಪೆ ಹಸಿರು ಬಣ್ಣದ್ದಾದರೆ ಈ ನೆರಳುಗಳ ಸಮಸ್ಯೆ ಇರುವುದಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

### ಬೆಳ್ಳಿ ಪರದೆಯ ಮೇಲೊಂದು ಹೊಸ ರೂಪಕ

## ಕೊರೋನಾ ಕಾಲದ ಸಿ.ಯೂ ಸೂನ್

- ಶೋಭಿತಾ ಎನ್.

ಕೊರೋನಾದ ಈ ಕಾಲಘಟ್ಟದಲ್ಲಿ ಜಗತ್ತೇ ಸ್ತಬ್ಧವಾಗಿದ್ದು, ಲಾಕ್‌ಡೌನ್‌ನಿಂದಾಗಿ ಉಳಿದೆಲ್ಲಾ ಕ್ಷೇತ್ರದಂತೆ ಚಿತ್ರರಂಗದ ಮೇಲೂ ಬಲವಾದ ಹೊಡೆತ ಬಿದ್ದಿದ್ದು ಸುಳ್ಳಲ್ಲ. ಇನ್ನು ಲಾಕ್‌ಡೌನ್ ಸಮಯದಲ್ಲಿ ವಿಧಿಸಲಾಗಿದ್ದ ಉಸಿರುಗಟ್ಟುವ ಕಟ್ಟುಪಾಡುಗಳ ಚೌಕಟ್ಟನ್ನೇ ಸೃಜನಶೀಲತೆಯ ಬುನಾದಿಯಾನ್ನಾಗಿಸಿಕೊಂಡು ನಿರ್ಮಾಣಗೊಂಡಿರುವ ಮಲಯಾಳಂ ಸಿನೆಮಾ 'ಸಿ ಯು ಸೂನ್'. ಮಾಮೂಲಿ ಸಿನಿಮಾ ಶೈಲಿಯ ಯಾವುದೇ ಆಡಂಬರಗಳಿಲ್ಲದೆ, ವಿಶಿಷ್ಟ ರೀತಿಯ ತಾಂತ್ರಿಕ ಉಪಕರಣಗಳಿಲ್ಲದೆ, ನೂರಾರು ಮಂದಿಯ ತಂತ್ರಜ್ಞರ ತಂಡವಿಲ್ಲದೆ ತುಂಬಾ ಸರಳವಾಗಿ ಮತ್ತು ವಿಭಿನ್ನವಾಗಿ ಐಫೋನ್‌ನಲ್ಲಿಯೇ ಒಂದು ವಿನೂತನ ಪ್ರಯತ್ನವನ್ನು ಮಾಡಿದ್ದಾರೆ. ಪ್ರವಾಸಿ ಹೆಣ್ಣು ಮಕ್ಕಳ ಮೇಲೆ ಎಲ್ಲೆಡೆ ನಡೆಯುವ ಮೋಸ, ದೌರ್ಜನ್ಯಗಳ ಎಳೆಗಳ ನೈಜ ಸಂಗತಿಗಳನ್ನಾಧರಿಸಿ ಕಟ್ಟಿದ ಕಥೆಯನ್ನು ವಿಭಿನ್ನ ಶೈಲಿಯಲ್ಲಿ ನಿರೂಪಿಸಿರುವ ಚಿತ್ರವಾಗಿದ್ದು, ನೋಡುಗರನ್ನು ಸಮ್ಮೋಹನಗೊಳಿಸುವಲ್ಲಿ ಯಶಸ್ವಿಯಾಗಿದೆ ಎಂಬುದು ಉತ್ಪ್ರೇಕ್ಷೆಯೆನಿಸಲಾರದು. ಕಥೆ-ಯುದ್ದಕ್ಕೂ ಸಾಗಿ ಬರುವ ನಾಲ್ಕೈದು ಪಾತ್ರಗಳು, ಅವು ಬಳಸುವ ಮೊಬೈಲ್, ಕಂಪ್ಯೂಟರ್ ಸ್ಕ್ರೀನ್‌ನ ಸೀಮಿತ ಚೌಕಟ್ಟಿನಲ್ಲಿಯೇ ಕಟ್ಟಲ್ಪಟ್ಟ ಘಟನಾವಳಿಗಳು ನೈಜತೆಯ ಮೇರೆ ಮೀರದೆ ನಮ್ಮ ನಡುವೆಯೇ ನಡೆಯುತ್ತಿರುವ ಘಟನೆಯೋ ಎಂಬಂತೆ ಭಾಸವಾಗುತ್ತದೆ. ಪ್ರಸ್ತುತ ಜಾಗತಿಕ ಮಾರುಕಟ್ಟೆಯ ಕೊಳ್ಳುಬಾಕತನದೊಂದಿಗೆ ಬೆಸೆದುಕೊಂಡ ನವ ಮಾಧ್ಯಮಗಳ ಮಹಾಪೂರದಲ್ಲಿ ರೂಪಾಂತರಗೊಂಡ ಮನುಷ್ಯ ಸಂಬಂಧಗಳು, ಸವಕಲಾಗುತ್ತಿರುವ ಮಾನವೀಯ ಮೌಲ್ಯಗಳ ತಾಕಲಾಟದಲ್ಲಿ ಜನ ಸಾಮಾನ್ಯರು ಎಷ್ಟು ಸುರಕ್ಷಿತರು ಮತ್ತೀ ನವಮಾಧ್ಯಮಗಳು ಸೃಷ್ಟಿಸುವ ಮಾಯಾಜಾಲದ ಸಿಕ್ಕಿನೊಳಗೆ ಸಿಲುಕಿದ ಜನ ಸಾಮಾನ್ಯರ ಅತಂತ್ರ ಸ್ಥಿತಿಯನ್ನು ದಟ್ಟವಾಗಿ ಕಟ್ಟಿಕೊಟ್ಟಿರುವ ನಿರ್ದೇಶಕ ಮಹೇಶ್ ನಾರಾಯಣ್ ಅವರ ನಿರೂಪಣಾ ಶೈಲಿ ನೋಡುಗರನ್ನ ಸಂಪೂರ್ಣವಾಗಿ ಆವರಿಸೊಳ್ಳುವಲ್ಲಿ ಯಶಸ್ವಿಯಾಗಿದೆ.

ಇನ್ನು ಸಿನೆಮಾ ಪ್ರಾರಂಭವಾಗುವುದು ಯು. ಎನ್. ಬ್ಯಾಂಕ್ ಒಂದರಲ್ಲಿ ಉದ್ಯೋಗಿಯಾಗಿರುವ ಮಲಯಾಳಿ ಜಿಮ್ಮಿಕುರಿಯನ್ (ರೋಷನ್) ಹಾಗೂ ದುಬೈಗೆ ಕೆಲಸ ಹುಡುಕುತ್ತಾ ಬರುವ ಅನು ಮೋಳ್ (ದರ್ಶನಾ ರಾಜನ್) ನಡುವೆ ಟಿಂಡರ್ ಎಂಬ ಡೇಟಿಂಗ್ ಆ್ಯಪ್ ಒಂದರ ಮೂಲಕ ಪರಿಚಯವಾಗುತ್ತದೆ. ಪರಿಚಯ ಮದುವೆ ಮಾತುಕತೆ ತನಕ ಬಂದು ನಿಲ್ಲುತ್ತದೆ. ಆದರೊಂದು ದಿನ ಕಥಾ ನಾಯಕಿ ಅನು ತನ್ನ ಗಾಯಗೊಂಡ ಮುಖದೊಂದಿಗೆ ಅಳುತ್ತಾ ಜಿಮ್ಮಿಗೆ ವೀಡಿಯೋ ಕರೆಯೊಂದನ್ನು ಮಾಡಿ ತನ್ನನ್ನು ರಕ್ಷಿಸುವಂತೆ ಕೋರುತ್ತಾಳೆ. ಅದರಂತೆ ಆಕೆಯನ್ನು ತನ್ನ ಮನೆಗೆ ಕರೆ ತರುವ ಜಿಮ್ಮಿ




ಆಕೆಯ ಆರೈಕೆಗೆ ಮುಂದಾಗುತ್ತಾನೆ. ಈ ದಿನಗಳಲ್ಲೊಂದು ದಿನ ಅನು ಡೆತ್‌ನೋಟನೊಂದನ್ನು ಬರೆದಿಟ್ಟು ನಾಪತ್ತೆಯಾಗುತ್ತಾಳೆ. ಗೊಂದಲಕ್ಕೀಡಾದ ಜಿಮ್ಮಿ ಅಮೇರಿಕಾದಲ್ಲಿರುವ ಜಿಮ್ಮಿಯ ಸೋದರ ಸಂಬಂಧಿ ಕೆವಿನ್ (ಫಹದ್ ಫಸಿಲ್)ಗೆ ತಿಳಿಸುತ್ತಾನೆ. ಆಕೆಯನ್ನು ಹುಡುಕುತ್ತಾ ಹೊರಡುವ ಕೆವಿನ್ (ಫಹದ್ ಫಸಿಲ್), ಇಲ್ಲಿಂದ ಕಥೆಗೆ ಒಂದೊಂದೇ ಟ್ವಿಸ್ಟ್ ಸಿಗುತ್ತಾ ಹೋಗುತ್ತಿದ್ದಂತೆ ಹ್ಯಾಕರ್ ಕೆವಿನ್ ಆಕೆಯ ಐ. ಪಿ. ಅಡ್ರೆಸ್‌ನ್ನು ಹ್ಯಾಕ್ ಮಾಡುವುದರ ಮೂಲಕ ಅನುವಿನ ಬದುಕಿನ ಕರಾಳ ಅಧ್ಯಾಯಗಳನ್ನು ಒಂದೊಂದಾಗಿಯೇ ಬೇಧಿಸುತ್ತಾ ಹೋಗುತ್ತಾನೆ. ಅನು ನಿಜಕ್ಕೂ ಯಾರು? ಆಕೆಯ ಮೇಲೆ ಹಲ್ಲೆ ನಡೆಸಿದ್ದಾದರೂ ಯಾರು? ಆಕೆ ಜಿಮ್ಮಿಯನ್ನು ಬಿಟ್ಟು ಹೋಗಿದ್ದರ ಉದ್ದೇಶ ಏನು?ಅವರಿಬ್ಬರು ಮತ್ತೆ ಒಂದಾಗುತ್ತಾರಾ? ಹೇಗೆ? ಅನ್ನುವ ಗೊಂದಲಮಯ ಪ್ರಶ್ನೆಗಳಿಗೆಲ್ಲಾ ಉತ್ತರಿಸುವ ಕೆವಿನ್ ಪಾತ್ರಧಾರಿ ಫಹದ್ ಫಸಿಲ್ ಅತ್ಯುತ್ತಮವಾಗಿ ತಮ್ಮ ಪಾತ್ರಕ್ಕೆ ಜಿವ ತುಂಬುವಲ್ಲಿ ಯಶಸ್ವಿಯಾಗಿದ್ದಾರೆ. ಸಿನೆಮಾದಲ್ಲಿರುವ ಈ ಮೂರು ಪಾತ್ರಗಳ ಜೊತೆಗೆ ಇನ್ನೂ ಕೆಲವು ಪಾತ್ರಗಳು ಹೊಸ ಟ್ವಿಸ್ಟ್‌ನೊಂದಿಗೆ ಕಾಣಿಸಿಕೊಳ್ಳುತ್ತಾ ಹೋಗುತ್ತವೆ. ಅದರಲ್ಲೂ ವಿಸಾ ಕಂಪೆನಿಯ ಮಾಲೀಕ ಜೋಸೆಫ್ ತಾರಕನ್ ಎನ್ನುವ ಪಾತ್ರ ಬಂದ ನಂತರ ಕಥೆಯ ಮಗ್ಗಲು ಬದಾಲಾಯಿಸುವ ಅನಿರೀಕ್ಷಿತ ತಿರುವುಗಳ ಕಥಾ ನಿರೂಪಣೆ ಕಥೆಯನ್ನು ಪದರ ಪದರವಾಗಿ ಬಿಚ್ಚಿಡುತ್ತದೆ. ಇನ್ನು ಚಿತ್ರದ ಮುಖ್ಯ ಆಕರ್ಷಣೆ ಎಂದರೆ ಡೆಸ್ಕ್‌ಟಾಪ್‌ನಲ್ಲಿ ಪದೇ ಪದೇ ಕಾಣಿಸುವ ಅನುವಿನ ಕಣ್ಣುಗಳು! ಅದನ್ನೇ ರೂಪಕವಾಗಿಸಿಕೊಂಡು ಕಥೆ ಕಟ್ಟುವ ಒಂದು ಹೊಸ ಪ್ರಯತ್ನ ಶೀಲ ಮಾರ್ಗ ಚಿತ್ರದ ನಿರ್ದೇಶಕರದು. ಅನುವಿನ ಬಗ್ಗೆ ತಿಳಿಯುತ್ತಾ ಹೋದಂತೆ ಆಕೆಯ ಕಣ್ಣುಗಳು ತೋರಿಸುವ ಭಾವನೆಗಳು ಒಂದಕ್ಕೊಂದು ಪೂರಕವಾಗಿ ಸಾಗುವ ಅನುಭವವನ್ನು ಕಟ್ಟಿ-ಕೊಡುತ್ತದೆ. ಇಂತಹ ಇನ್ನೂ ಕೆಲವು ಸೃಜನಾತ್ಮಕ ವಿಷಯಗಳು ಈ ಚಿತ್ರದಲ್ಲಿದ್ದು, ಉಳಿದ ಸಿನೆಮಾಗಳ ನಿರೂಪಣಾ ಶೈಲಿಗಿಂತ ವಿಭಿನ್ನವಾಗಿದ್ದು ಚಿತ್ರ ಮುಗಿದ ನಂತರವೂ ಮನದಲ್ಲುಳಿಯುವ ತಳಮಳ ಮತ್ತು ಅನುರಣಿಸುತ್ತಲೇ ಇರುವ ಕದಡಿದ ಮನಃಸ್ಥಿತಿ ಸಿನಿಮಾದ ಯಶಸ್ಸಿಗೊಂದು ಸಾಕ್ಷಿ.

## ಕಡಖ್ ಕೋಳಿ ಈ ಖಡಖ್‌ನಾಥ್

-ಪ್ರೇಮ. ಹೆಚ್. ಕೆ.

ಕೋಳಿಯು ಒಂದು ಪಳಗಿಸಿದ ಹಕ್ಕಿ. ಕೋಳಿಗಳಲ್ಲಿಯೇ ನಾನಾ ವಿಧವಾದ ತಳಿಗಳನ್ನು ಕಾಣಬಹುದು. ಅವುಗಳಲ್ಲಿ ದೇಸಿ ಕೋಳಿ, ಟರ್ಕಿ, ಫಾರಂ, ಗಿರಿರಾಜ, ಕಾಡು-ಕೋಳಿ ಮುಂತಾದ ಹತ್ತು ಹಲವು ತರಹದ ತಳಿಗಳನ್ನು ನೀವೆಲ್ಲರೂ ನೋಡಿರಬಹುದು ಹಾಗೂ ತಿಂದಿರಬಹುದು. ಕೋಳಿಯು ಕೆಂಪು ಕಾಡು ಕೋಳಿಯ ಉಪ ಪ್ರಜಾತಿಯಾಗಿದೆ. ದೇಶೀಯ ಪ್ರಾಣಿಗಳ ಪೈಕಿ ಅತಿ ಸಾಮಾನ್ಯ ಹಾಗೂ ವ್ಯಾಪಕ. 2003 ರಲ್ಲಿ 24 ಬಿಲಿಯನ್‌ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿತ್ತೆಂದು ಅಂದಾಜು ಮಾಡಲಾಗಿದೆ.

ಆದರೆ, ಕಪ್ಪು ಮಾಂಸ ಹಾಗೂ ಕಪ್ಪು ಮೊಟ್ಟೆ, ಕಪ್ಪು ರಕ್ತದ ಕೋಳಿಯ ಬಗ್ಗೆ ನಾವು ಈವರೆಗೂ ಕೇಳಿರದ ಸಂಗತಿ, ಅದೇ ಖಡಕ್‌ನಾಥ್ ತಳಿಯ ಕೋಳಿಗಳು. ಈ ಕೋಳಿಗಳ ಸಾಕಾಣಿಕೆ ಮೂಲತಃ ಮದ್ಯಪ್ರದೇಶದ ಬುಡಕಟ್ಟು ಸಮುದಾಯಗಳಲ್ಲಿ ಪ್ರಚಲಿತದಲ್ಲಿದ್ದು ಪ್ರಸ್ತುತ ತಮಿಳುನಾಡಿನಾದ್ಯಂತ ಈ ತಳಿಯ ಕೋಳಿಗಳ ಸಾಕಾಣಿಕೆ ಹೆಚ್ಚು ವ್ಯಾಪಕವಾಗಿದೆ. ನಮಗೆ ತಿಳಿದಿರುವ ನಾಟಿ ಕೋಳಿ ಮಾಂಸಕ್ಕಿಂತ ಖಡಖ್‌ನಾಥ್ ಕೋಳಿ



ಮಾಂಸದಲ್ಲಿ ಹೆಚ್ಚಿನ ಪ್ರೋಟಿನ್ ಹೊಂದಿದ್ದು ನಾಟಿ ಕೋಳಿ ಮಾಂಸಕ್ಕಿಂತಲೂ ಇದು ಹೆಚ್ಚಿನ ಬೇಡಿಕೆಯನ್ನು ಹೊಂದಿದೆ. ಇದರ ಉಪಯೋಗ ಎಷ್ಟಿದೆ ಎಂದರೆ ಇದರ ಮಾಂಸ ತಿನ್ನುವುದಕ್ಕೆ ಮಾತ್ರವಲ್ಲದೆ ಔಷಧಿಗಳಿಗೆ ಬಳಸುತ್ತಾರೆ. ಸಾಧಾರಣ ನಾಟಿ ಕೋಳಿಗಳಿಗೆ ಹೋಲಿಸಿದರೆ ಈ ಕೋಳಿಯಲ್ಲಿ ವಿಟಮಿನ್ ಡಿ1, ವಿಟಮಿನ್ 2,6,12 ಹಾಗೂ ಸಿ ಜೀವಸತ್ವ, ಕ್ಯಾಲ್ಸಿಯಂ ಅಂಶಗಳು ಹೆಚ್ಚಾಗಿದ್ದು, ನ್ಯುಮೋನಿಯಾ, ರಕ್ತಹೀನತೆ ಇನ್ನಿತರ ಸಮಸ್ಯೆಗಳಾದ ಕ್ಷಯ, ಬಿ.ಪಿ, ಅಸ್ತಮಾದಂತಹ ಕಾಯಿಲೆಗಳಿಗೆ ಸಿದ್ಧೌಷಧವಾಗಿದೆ. ರಕ್ತಸ್ರಾವ, ಗರ್ಭಪಾತ ಪ್ರಸವದ ನಂತರದಲ್ಲಿ ಹಾಗೂ ನರಗಳ ದೌರ್ಬಲ್ಯವನ್ನು ತಡೆಗಟ್ಟುವಲ್ಲಿ ಒಂದು ಪರಿಣಾಮಕಾರಿ ಔಷಧವಾಗಿಯೂ ಬಳಕೆಯಲ್ಲಿದೆ. ಇದರಲ್ಲಿ ಕೊಬ್ಬಿನ ಪದಾರ್ಥವು ಕಡಿಮೆ ಇದ್ದು ಮಾರುಕಟ್ಟೆಯಲ್ಲಿ ಇದರ ಬೇಡಿಕೆ ದಿನದಿಂದ ದಿನಕ್ಕೆ ಏರು ಗತಿಯಲ್ಲಿ ಸಾಗಿದೆ. ಸಧ್ಯ ಪ್ರತಿ ಒಂದು ಕೆ.ಜಿ ಖಡಖ್ನಾಥ್ ಕೋಳಿ ಮಾಂಸದ ಬೆಲೆ ರೂ.1000 ಇದೆ. ಇದರ ಮೊಟ್ಟೆಯ ಬೆಲೆ ರೂ.45. ಒಂದು ಜೊತೆ ಕೋಳಿಗಳು ವರ್ಷಕ್ಕೆ 80 ರಿಂದ 100 ಕ್ಕೂ ಹೆಚ್ಚು ಮೊಟ್ಟೆಗಳನ್ನು ಇಡುತ್ತದೆ. ಹಾಗಾಗಿ ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವ ಗ್ರಾಮೀಣ ಜನರಿಗೊಂದು ಪರ್ಯಾಯ ಆದಾಯ ಮೂಲವೂ ಆಗುವ ಸಾಧ್ಯತೆ ನಿಚ್ಚಳವಾಗಿದೆ.

## ಮನುಜ ಮತ... ವಿಶ್ವ ಪಥ... ಮಂಗಳೂರು ವಿ.ವಿಯಲ್ಲಿ ವಿಶ್ವ ಮಾನವ ದಿನಾಚರಣೆ



ಮಾತಾನ್ನಾಡುತ್ತಾ ಕುವೆಂಪು ಅವರು ಹಚ್ಚಿಟ್ಟ ಜ್ಞಾನ ದೀವಿಗೆಯ ಬೆಳಕಲ್ಲಿ ಎಲ್ಲಾ ವಿದ್ಯಾರ್ಥಿಗಳೂ, ಯುವಕರು ತಮ್ಮ ಚಿಂತನೆಯ ಹರವನ್ನು ವಿಸ್ತರಿಸಿಕೊಳ್ಳ ಬೇಕು ಎಂದು ತಿಳಿಸಿದರು.

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ.ಅಭಯ್‌ಕುಮಾರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಾಗ್ಮಿ ಮುನಿರಾಜು ರೆಂಜಾಳ ಅವರು ಅರ್ಥಾನುಸಂದಾನ ನಡೆಸಿಕೊಟ್ಟರು ಮತ್ತು ಕಾವ್ಯ ಗಾಯನವನ್ನು ಶ್ರೀ ದೇವಿ ಕಲಡ್ಕ ಶ್ರೀ ವಾಣಿ ಕಾಕುಂಜೆ ಅವರು ನಡೆಸಿದರು. ಡಾ.ದಿನೇಶ್ ಸುಳ್ಯ ಹಿನ್ನೆಲೆ ಸಂಗೀತ ಹಾಗೂ ತಬಲ ಸಹಕಾರ ನೀಡಿದರು.

ಕಾರ್ಯಕ್ರಮವನ್ನು ವಿಭಾಗದ ಸಹಾಯಕ ಪ್ರಾಧ್ಯಾಪಕ ಧನಂಜಯ ಕುಂಬ್ಳೆ ಅವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ವಿ.ವಿ.ಯ ವಿದ್ಯಾರ್ಥಿ ಬಳಗ, ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಪ್ರಸ್ತುತ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಲೋಕಾರ್ಪಣೆಗೊಂಡ ಪ್ರೊ. ಸಬಿಹಾ ಭೂಮಿ ಗೌಡರ ಕೃತಿಗಳು

ಇತ್ತೀಚೆಗೆ ಮಂಗಳೂರು ವಿ.ವಿ.ಯಲ್ಲಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಕವಿ ಪ್ರಕಾಶನ ಕವಲಕ್ಕಿ ಇವರ ಸಹಯೋಗದಲ್ಲಿ ಕನ್ನಡ ವಿಭಾಗದ ಹಿರಿಯ ಪ್ರಾಧ್ಯಾಪಕಿಯಾಗಿರುವ ಪ್ರೊ. ಸಬಿಹ ಭೂಮಿಗೌಡ ಅವರ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವೆ ಪ್ರೊ.ಆರ್.ಸುನಂದಮ್ಮ ಅವರು ಪ್ರೊ. ಸಬಿಹಾ ಭೂಮಿ ಗೌಡರ "ನಾರಿನೋಟ" ಮತ್ತು "ಈವರೆಗಿನ ಕವಿತೆಗಳು" ಎಂಬ ಎರಡು ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತಾನ್ನಾಡುತ್ತಾ, "ಪ್ರೊ. ಸಬಿಹಾ ಭೂಮಿ ಗೌಡರ ಸಂಯಮ, ಕರ್ತವ್ಯನಿಷ್ಠೆ ತಾಳ್ಮೆ, ಗಾಢಚಿಂತನೆ ಹಾಗೂ ಅದಮ್ಯ ಬದ್ಧತೆಯ ಕಾರಣ ಈ ಕೃತಿಗಳು ಬಿಡುಗಡೆಯಾಗುತ್ತಿವೆ. ಮಹಿಳಾ ಸಾಹಿತ್ಯ ಕೇವಲ ಅಡುಗೆ ಮನೆ ಸಾಹಿತ್ಯಕ್ಕಷ್ಟೇ ಸೀಮಿತವಲ್ಲ, ಹೆಣ್ಣಿನ ಜಗವರಿಯದ ಗಂಡಿಗೆ ನೋವು ದುಃಖ ಸಂವೇದನೆಗಳನ್ನು ಅರ್ಥೈಸಬೇಕಾದ




ಸಂದರ್ಭವಿದು" ಎಂದು ಅಭಿಪ್ರಾಯ ಪಟ್ಟರು, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ. ಅಭಯ್ ಕುಮಾರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ.ರೇಖಾ ಬನ್ನಾಡಿ ಅವರು ನಾರೀನೋಟ ಕೃತಿಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರು. ಪ್ರೊ. ಸಬಿಹಾ ಭೂಮಿ ಗೌಡರ ಅವರ ಇನ್ನೊಂದು ಕೃತಿ ಈವರೆಗಿನ ಕವಿತೆಗಳು ಕೃತಿಯ ಕುರಿತು ಡಾ. ಜಯಪ್ರಕಾಶ್ ಶೆಟ್ಟಿ ವಿವರಿಸಿದರು. ವಿದ್ಯಾರ್ಥಿಗಳು ಕವನ ವಾಚಿಸಿದರು. ಡಾ. ಧನಂಜಯ ಕುಂಬ್ಳೆ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಬಸ್ಸ ಪಯಣದಲ್ಲೊಂದಿಷ್ಟು ನೆನಪುಗಳ ದಿಬ್ಬಣ

-ಮಮತ ಬಿ.

ಆಹಾ... ! ಬಸ್ಸಿನಲ್ಲಿ ಪ್ರಯಾಣ ಎಂದರೆ ಏನೋ ಒಂದು ರೀತಿಯ ಮಜಾ, ಸಂತೋಷ, ಆನಂದಗಳ ಜೊತೆಗೆ ಹೊಸ -ಹೊಸ ಅನುಭವಗಳ ತಾಣ. ಯಾವುದೋ ಊರಿನಿಂದ ಯಾವುದೋ ಊರಿಗೆ ಹೋಗುವ ಜನ, ಪರಿಚಯವಿಲ್ಲದ ಅಪರಿಚಿತ ವ್ಯಕ್ತಿಗಳ ಜೊತೆಗೆ ನಮ್ಮ ಪ್ರಯಾಣ. ಎಲ್ಲರ ದಾರಿ ಒಂದೇ, ಎಲ್ಲರೂ ಪ್ರಯಾಣಿಸುವ ವಾಹನ ಒಂದೇ ಆದರೆ ಇಳಿಯುವ ತಾಣ ಬೇರೆ ಬೇರೆ ಅಷ್ಟೇ.. ಬಸ್ಸಿನಲ್ಲಿ ಅಪರಿಚಿತ ವ್ಯಕ್ತಿಗಳ ಪರಿಚಿತರಾಗುತ್ತಾರೆ, ಸ್ನೇಹಿತರಾಗುತ್ತಾರೆ, ಆತ್ಮೀಯರಾಗುತ್ತಾರೆ. ಕಣ್ಣು ಸನ್ನೆಗಳ ಮೂಲಕ ಕೆಲವರ ಪ್ರೇಮ ಪ್ರಣಯಗಳು ಬಸ್ಸಿನಲ್ಲೇ ಆರಂಭವಾಗುತ್ತದೆ.

ಕೇಳಿಸುತ್ತದೆ. ಇನ್ನು ಕೆಲವು ಹುಡುಗರಂತೂ ಬಸ್ಸಿನ ಬಾಗಿಲಿನಲ್ಲಿ ನಿಂತು ಬಾವಲಿಯಂತೆ ನೇತಾಡುತ್ತಿರುತ್ತಾರೆ. ಮಿಸ್ ಆದರೆ ತಿರುಪತಿ ಹುಂಡಿಗೆ ಬಿದ್ದಂತೆ ನಂತರ 108 ರಲ್ಲೇ ಅವರ ಪ್ರಯಾಣ. ಇಷ್ಟೆಲ್ಲಾ ಘಟನೆಗಳು ನಡೆಯುತಿದ್ದರು ನನಗೂ ಈ ಬಸ್ಸಿಗೂ ಯಾವುದೇ ಸಂಬಂಧ ಇಲ್ಲ ಎಂಬಂತೆ ತನ್ನ ಪಾಡಿಗೆ ಮೊಬೈಲ್ ಹಿಡಿದುಕೊಂಡು ಕುಳಿತುಕೊಳ್ಳುವ ವ್ಯಕ್ತಿಗಳು ಕೂಡ ನಮಗೆ ಬಸ್ಸಿನಲ್ಲಿ ಸಿಗುತ್ತಾರೆ. ಅಪರಿಚಿತ ವ್ಯಕ್ತಿಗಳು ಮಾತನ್ನಾಡುತ್ತಾ ಆತ್ಮೀಯರಾಗಿ ಬಿಡುತ್ತಾರೆ. ಈ ಎಲ್ಲಾ ಅನುಭವಗಳು ನಮಗೆ ಸಿಗುವುದು ಬಸ್ಸಿನಲ್ಲಿ ಪ್ರಯಾಣಿಸಿದಾಗ ಮಾತ್ರ. ಬೈಕ್, ಕಾರುಗಳಲ್ಲಿ ಪ್ರಯಾಣಿಸಿದಾಗ ಸಿಗಲ್ಲ.




ಪ್ರೇಮಿಗಳ ಪ್ರಣಯ ಒಂದು ಕಡೆ-ಯಾದರೆ ಮತ್ತೊಂದೆಡೆ ಪ್ರೇಮಕ್ಕಿಂತ ಸ್ನೇಹವೇ ಬೆಸ್ಟ್ ಎಂಬಂತೆ ಲಾಸ್ಟ್ ಸೀಟಿನಲ್ಲಿ ತಮ್ಮದೇ ಸಾಮ್ರಾಜ್ಯವನ್ನು ಸೃಷ್ಟಿಸುವ ಗೆಳೆಯರ ಬಳಗ ಮೋಜು, ಮಸ್ತಿ, ತಲೆಹರಟೆ ಮಾತುಗಳನ್ನಾಡುತ್ತಾ ಬಿಂದಾಸ್ ಆಗಿರುವ ಜಾಲಿ ಗೈಸ್. ಕೆಲಸಕ್ಕೆ ತಡವಾಯಿತು ಅಥವಾ ಮನೆಗೆ ಯಾವಾಗ ತಲುಪುತ್ತೇನೇ ಎಂದು ತಡವರಿಸುವ ದುಡಿಮೆಯ ಜನರು. ಈ ಎಲ್ಲದರ ನಡುವೆ ಶಾಲೆ ಬಿಟ್ಟ ತಕ್ಷಣ ಓಡಿ ಬರುವ ಪುಟ್ಟಾಣಿ ಮಕ್ಕಳು, ಮಕ್ಕಳಿಗಿಂತ ಅವರ ಬ್ಯಾಗ್ ದೊಡ್ಡದಾಗಿರುತ್ತದೆ. ಬ್ಯಾಗ್ ಅನ್ನು ಅವರು ಹಾಕುತ್ತಾರೋ ಅಥವಾ ಬ್ಯಾಗ್‌ಗೆ ಅವರನ್ನು ಹಾಕಿಕೊಳ್ಳುತ್ತಾರೋ ಗೊತ್ತಾಗುವುದಿಲ್ಲ.

ಬಸ್ಸಿನಲ್ಲಿ ಕುಳಿತವರ ಕೈಗೆ ಬ್ಯಾಗ್ ಕೊಟ್ಟು ತಮ್ಮ ಸಹಪಾಠಿಗಳ ಜೊತೆ ಕ್ಲಾಸಿನಲ್ಲಿ ಆದ ವಿಷಯಗಳನ್ನು ಹಂಚಿಕೊಳ್ಳುತ್ತ ಕಿಲ ಕಿಲ ಎಂದು ನಗುತ್ತಾ ನಿಂತು ಬಿಡುತ್ತಾರೆ. ಇನ್ನೂ ಉತ್ತರ ಕರ್ನಾಟಕ ಘಾಟಿ ಜನ ಮೊಬೈಲ್ ನಲ್ಲಿ ಮಾತನಾಡುವಾಗ ಅವರ ಮಾತುಗಳು ಮೊಬೈಲ್‌ನಲ್ಲಿ ಮಾತಾನಾಡುವವರಿಗೆ ಕೇಳಿಸುತ್ತದೆಯೊ ಇಲ್ಲವೋ ಗೊತ್ತಿಲ್ಲ. ಆದರೆ ಬಸ್ಸಿನಲ್ಲಿ ಕುಳಿತವರಿಗಂತೂ ಚೆನ್ನಾಗಿ

ಬಸ್ಸಿನ ಪ್ರಯಾಣ ನಮಗೆ ಹಲವು ಪಾಠಗಳನ್ನು ಕಲಿಸಿಕೊಡುತ್ತದೆ. ಹೊರ ಜಗತ್ತಿನ ಅದ್ಭುತ ಪರಿಚಯ ನಮಗಾಗುವುದು ಬಸ್ಸುಗಳಲ್ಲಿಯೇ. "ಅನುಭವ ಸವಿಯಲ್ಲ ಅದರ ನೆನಪೆ ಸವಿ"ಎಂಬ ಮಾತುನ್ನು ಒಪ್ಪುವುದಾದರೆ ಬಸ್ಸಿನ ಅನುಭವಗಳೂ ಸದಾ ಸ್ಮರಣೀಯ.

ಮುಖ್ಯ ಸಂಪಾದಕರು
ಶ್ರೀ ಎಂ. ಪಿ. ಉಮೇಶ್ ಚಂದ್ರ
ವಿಭಾಗದ ಅಧ್ಯಕ್ಷರು ಮತ್ತು ಸಹಾಯಕ ಪ್ರಾಧ್ಯಾಪಕರು

ಮಾರ್ಗದರ್ಶಕ ಉಪನ್ಯಾಸಕರು
ಶಶಿಧರ್
ಅನುಷಾ ಎ
ನಿತೀಶ್ ಪಿ

ವಿದ್ಯಾರ್ಥಿ ಸಂಪಾದಕರು
ಶೋಭಿತಾ.ಎನ್
ಭವ್ಯ ಶ್ರೀ.ಎಸ್
ರಂಜಿತ್. .ಪಿ
ಮಮತ. ಬಿ
ಲಾವಣ್ಯ ಕೆ .ಎಸ್

## ಮಾದಕ ಜಾಲದ ಸುಳಿಯಲ್ಲಿ ಕಮರುವ ಕನಸುಗಳು...

-ಶರಣ್ಯ ಕುಮಾರಿ ಕೆ.

ಹೆಸರು ವಿದ್ಯಾ ನಗರ. ಹೆಸರಿಗೆ ತಕ್ಕಂತೆ ಹೆಜ್ಜೆ ಹೆಜ್ಜೆಗೂ ಪೆಟ್ಟಿಗೆ ಅಂಗಡಿಗಳಂತೆ ಹರಡಿರುವ ಚಿತ್ರ ವಿಚಿತ್ರ ಹೆಸರುಗಳ ಹೊತ್ತ ಶಿಕ್ಷಣವನ್ನು ಮಾರುಕಟ್ಟೆಯ ಸರಕನ್ನಾಗಿಸಿರುವ ಸೋಕಾಲ್ಡ್ ಶಿಕ್ಷಣ ಸಂಸ್ಥೆಗಳು. ಅವುಗಳಿಂದ ಅನತಿ ದೂರದಲ್ಲಿರುವ, ಗಿಡಮರ ಮುಳ್ಳುಗಳಿಂದಾವೃತವಾದ ಕಾಡಿನಂತಹ ಪ್ರದೇಶ. ಅಲ್ಲೊಂದು ಪಾಳು ಬಿದ್ದ ಕಟ್ಟಡ. ಸುತ್ತಲೂ ಹರಡಿ ಬಿದ್ದಿರುವ ಕಸದ ರಾಶಿ. ಕಣ್ಣಿಗೆ ರಾಚುವ ಪ್ಲಾಸ್ಟಿಕ್ ಚೀಲ, ಮದ್ಯದ ಬಾಟಲಿಗಳು. ಅವುಗಳನ್ನು ದಾಟಿ ಮುಂದೆ ಹೋದರೆ ಅಗಲೋ ಈಗಲೋ ಎಂಬಂತಿರುವ ಪಾಳು ಬಿದ್ದ ಕಟ್ಟಡ. ಒಳ ಹೊಕ್ಕರೆ ಅಲ್ಲಲ್ಲಿ ಗುಡ್ಡೆ ಬಿದ್ದಿರುವ ಬಣ್ಣಗೆಟ್ಟ ಸಿರಿಂಜ್‌ಗಳು, ಸಿಗರೇಟ್ ತುಂಡುಗಳು, ಯಾವುದೋ ಟ್ಯಾಬ್ಲೆಟ್ಟಗಳ ಖಾಲಿ ಬಿದ್ದ ಸ್ಟ್ರಿಪ್‌ಗಳು, ಅನಾಥವಾಗಿ ಖಾಲಿ ಬಿದ್ದಿರುವ ಮದ್ಯದ ಬಾಟಲ್‌ಗಳು, ಚಿಂದಿ ಬಟ್ಟೆಗಳು. ಮೂಗಿಗಡರುವ ಸಿಗರೇಟಿನ ಹೊಗೆ ಸಗಣಿ ಸುಟ್ಟ ಕಮಟು ವಾಸನೆಯ ಘಮಲು. ಅರೆ ಪ್ರಜ್ಞಾವಸ್ಥೆಯಲ್ಲಿ ಅಲ್ಲಲ್ಲಿ ಅಡ್ಡಾದಿಡ್ಡಿ ಬಿದ್ದುಕೊಂಡಿರುವ ವಿಚಿತ್ರ ವೇಷ ಭೂಷಣದ ಪಡ್ಡೆ ಹುಡುಗ ಹುಡುಗಿಯರು. ಆ ಸ್ಥಿತಿಯಲ್ಲೇ ಅಗಾಗ ಮುಂಗೈಗೆ ಒಂದಷ್ಟು ಪುಡಿಯನ್ನು ಸುರಿದು ಸಿಲ್ವರ್ ಫಾಯಿಲ್‌ನ ನಳಿಕೆಯಿಂದ ಮೂಗಿಗೇರಿಸಿಕೊಳ್ಳುವ ಕೆಲವರು, ಮತ್ತೆ ಕೆಲವರು ತೋಳಿಗೆ ಪಟ್ಟಿ ಕಟ್ಟಿಕೊಂಡು ಇಂಜಕ್ಷನ್ ಸಿರಿಂಜ್ನಲ್ಲಿ ಮಾದಕ ದ್ರವ್ಯವನ್ನು ಚುಚ್ಚಿ ಕೊಳ್ಳುತ್ತಾ ನಿಶೆಯ ಕನವರಿಕೆಗಳ ಜೊತೆಗೆ ಕಳೆದ ಕನಸುಗಳ ಬಿಕ್ಕಳಿಕೆಗಳು. ಹೀಗೆ ಅಲ್ಲೊಂದು ನೆದರಿಲ್ಲದ ಮಾದಕತೆಯ ಮಾಯಾ ಲೋಕವೇ ಸೃಷ್ಟಿಯಾಗಿತ್ತು....

ಇಂತಹ ಮಾದಕ ಜಾಲದ ಉನ್ಮಾದ ಲೋಕ-ಕ್ಕೆ ಸುಲಭದ ಬಲಿಪಶುಗಳಾಗುವ ಇಂದಿನ ಯುವಜನತೆ, ಜೀವನದ ವಾಸ್ತವತೆಯನ್ನು ಗಂಭೀರವಾಗಿ ಪರಿಗಣಿಸದೇ ನಶೆಯ ಲೋಲುಪ್ತತೆಯಲ್ಲಿ ನಿರ್ಜೀವ ಸಮಾಜದ ಅಡಿಗಲ್ಲುಗಳಾಗುತ್ತಿದ್ದಾರೆ. ಯುವಜನತೆಯ ಈ ಘೋರ ವ್ಯಸನದ ಮೂಲ ಕಾರಣಗಳನ್ನು ಅರಸುತ್ತಾ ಹೋದರೆ ಕಣ್ಣಿಗೆ ರಾಚುವ ಕಹಿ ಸತ್ಯಗಳು ಹತ್ತು ಹಲವು.

ಇದು ಕೇವಲ ಸ್ಥಳೀಯ ಸಮಸ್ಯೆ ಮಾತ್ರವಲ್ಲ ಇದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮಸ್ಯೆಯೂ ಹೌದು. ಇಂದಿನ ಜಾಗತಿಕ ಸಮಾಜದ ಅರ್ಥಹೀನ ಪೈಪೋಟಿಯ ಧಾವಂತದಲ್ಲಿ ಸಂಬಂಧಗಳೆಲ್ಲವೂ ಬಣ್ಣಗೆಟ್ಟ ಸಂ-ಬಂಧಗಳಾಗಿ ಬದಲಾಗಿದ್ದು ಬದುಕ ಸಾರವೇ ಹಣ ಗಳಿಕೆ ಎಂಬಂತಾಗಿದೆ. ಯಾವುದೇ ಸಮಾಜ ಸಮುದಾಯಗಳನ್ನು ಸರ್ವ ನಾಶಗೊಳಿಸ ಬೇಕಿದ್ದರೆ ಅಲ್ಲಿನ ಯುವ ಸಮುದಾಯದ ಮನಸ್ಸುಗಳನ್ನು ವ್ಯಸನ ಭ್ರಷ್ಟಗೊಳಿಸಿದರೆ ಸಾಕು ಎನ್ನುವ ಮನೆ ಮುರುಕತನದ ಮಾತು ಚಾಲ್ತಿಯಲ್ಲಿದೆ. ಒಂದೆಡೆ ವಿಶ್ವದಾದ್ಯಂತ ಹರಡಿರುವ ಮಾದಕ ದ್ರವ್ಯ ಜಾಲದ ಹಿಂದಿರುವ ಅಂತರಾಷ್ಟ್ರೀಯ ಮಟ್ಟದ ಕಬಂಧ ಹಸ್ತಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ, ನಮ್ಮ ನಡುವಿನ ರಾಜಕಾರಣದಲ್ಲೇ ಬಾಹ್ಯ ಹಾಗೂ ಅಂತರಿಕವಾಗಿ ಬಂದಳಿಕೆಗಳಂತೆ ಹರಡಿಕೊಂಡಿರುವ ಭ್ರಷ್ಟಗೊಂಡ ವಿಕೃತ ಮನಸ್ಸುಗಳು. ಮತ್ತೊಂದೆಡೆ ಸಿರಿತನದ ಗರ ಬಡಿದು ಹಗಲಿರುಳು ಹಣ ಸಂಪಾದಿಸುವ ಹಪಾಹಪಿಗೆ ಬಿದ್ದ ಪೋಷಕ ವರ್ಗ, ಕೊಳ್ಳು ಬಾಕತನವೆಂಬ ಅಷ್ಟಪದಿಯ ಬಾಹುಗಳಲ್ಲಿ ಸಿಲುಕಿ ಸಿರಿತನದ ಪೊಳ್ಳು ಪ್ರತಿಷ್ಠೆಯ ನಾಟಕ ರಂಗದಲ್ಲಿ ಜೀವನ್ಮೃತರ ಪಾತ್ರ ನಿರ್ವಹಿಸುವ ಮೇಲಾಟ. ಪೋಷಕರ ಈ ಆತ್ಮ ರತಿಯ ತಹತಹಿಕೆಗಳ ತಾಕಲಾಟದಲ್ಲಿ ನಿರ್ಲಕ್ಷ್ಯ-ಕ್ಕೆ ಈಡಾದ ಯುವ ಜನಾಂಗವನ್ನು ಸುಲಭದಲ್ಲಿ ತನ್ನ ತೆಕ್ಕೆಗೆ ಸೆಳೆದುಕೊಳ್ಳುವ ಮತ್ತಿನ ಮಾಯಾಂಗನೆ ತನ್ನ ನಶಾ ಲೋಕದ ಭ್ರಮೆಯಲ್ಲಿ ಯುವ ಜನತೆಯ ಹಸಿಬಿಸಿ ಕನಸುಗಳನ್ನು ಕರಗಿಸಿ ಕಸುವು ಕಳೆದ ಜೀವಚ್ಛವಗಳನ್ನಾಗಿಸಿ ಬಿಡುತ್ತದೆ.

ಬೆಳೆಯುತ್ತಿರುವ ಮಕ್ಕಳ ಚಲನವಲನ, ಭವಿಷ್ಯದ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸದೆ, ಪ್ರೀತಿ ವಾತ್ಸಲ್ಯವನ್ನೂ ಹಣದಿಂದಲೇ ಅಳೆಯುವ ಪೋಷಕರು ಮಕ್ಕಳು ತಮ್ಮ ಹದ್ದು ಬಸ್ತಿನಲ್ಲಿರುತ್ತಾರೆ ಎಂಬ ಭ್ರಾಮಕತನದಲ್ಲಿ ಅವರು ಕೇಳಿದಾಗಲೆಲ್ಲಾ ಮೊಗೆ ಮೊಗೆದು ಹಣ ಕೊಡುತ್ತಾ ಅವರನ್ನು ತಮಗರಿವಿಲ್ಲದಂತೆ ಬ್ಯಾಗಡೆ ಬದುಕಿನ ಗುಲಾಮರನ್ನಾಗಿಸಿ ಬಿಟ್ಟಿರುತ್ತಾರೆ. ಲಗಾಮು ಇಲ್ಲದ ಕುದುರೆಯಂತೆ ದುರ್ಗುಣಗಳ ದಾಸರಾಗುವ ಮಕ್ಕಳು ಸಮಾಜ ಘಾತಕ ಚಟುವಟಿಕೆಗಳಲ್ಲಿ ಪಾಲ್ಗೊಳುತ್ತಾರೆ ಹಾಗೂ ಅನುಸರಿಸುತ್ತಾರೆ. ಇದು ಅತಿಯಾದಾಗ ಕಾಲ ಮಿಂಚಿ ಹೋಗಿರುತ್ತದೆ ಮತ್ತು ಮಕ್ಕಳ ಅಮೂಲ್ಯ ಜೀವನದ ಬಹುಭಾಗ ನಾಶವಾಗಿರುತ್ತದೆ.

ಇಂದಿನ ಸ್ಪರ್ಧಾಜಗತ್ತಿನ ಧಾವಂತದ ನಾಗಾಲೋಟದಲ್ಲಿ ತಾಳ್ಮೆ ಸಹನೆ ಎಂಬುದು ಮರೀಚಿಕೆಯಾಗಿದೆ. ಪ್ರತಿಯೊಬ್ಬರಿಗೂ ಶಾರ್ಟ್‌ಕಟ್ ಸಕ್ಸಸ್ ಬೇಕಾಗಿದೆ. ಜೀವನದಲ್ಲಿ ಆದಷ್ಟು ಬೇಗ ಶಿಕ್ಷಣ ಪೂರೈಸಿ ಉದ್ಯೋಗ, ಹಣ, ಕೀರ್ತಿ ಪಡೆಯುವ ಹುಚ್ಚು ಕಲ್ಪನೆ ಇರುತ್ತದೆ. ಸೆಲೆಬ್ರಿಟಿಗಳಾಗಿ ಲೈಂ ಲೈಟ್ನಲ್ಲಿ ಮಿಂಚುವ ತಹತಹಿಕೆ ಇರುತ್ತದೆ. ಈ ತಹತಹಿಕೆ ಭ್ರಾಮಕ ಜಗತ್ತಿನ ಹುಚ್ಚು ಕಲ್ಪನೆಗಳೊಂದಿಗೆ, ಮುಖ್ಯವಾಗಿ ವೈಭವೀಕೃತ ಶೋಕಿ ಜೀವನ ಶೈಲಿ ಯುವ ಜನರನ್ನು ಪಬ್‌ಡ್ಯಾನ್ಸ್, ಕ್ಲಬ್ ಪಾರ್ಟಿಗಳಿಗೆ, ರೆವ್ ಪಾರ್ಟಿ, ಬ್ಲೂಮೂನ್ ಟ್ರಿಪ್ ಅಂತಹ ವಿಕೃತ ಉನ್ಮಾದದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಇದರೊಂದಿಗೆ ಜಗಮಗಿಸುವ ಮದುವೆ ಸಮಾರಂಭ, ಹುಚ್ಚೆದ್ದು ಕುಣಿದು ಕುಪ್ಪಳಿಸುವ ಬರ್ತ್‌ಡೆಯಂತ ಪಾರ್ಟಿಗಳಿಗೆ ಸೆಳೆಯುತ್ತದೆ. ಅಲ್ಲಿ ಸಿಗುವ ಬಿಟ್ಟಿ ಮದ್ಯ ಹಾಗು ಅಮಲು ಪದಾರ್ಥಗಳನ್ನು ಕುಡಿ-ದು ತಿಂದು ಕಿವಿಗಡಚಿಕ್ಕುವ ಡಿಜೆ ಹಾಡುಗಳಿಗೆ ಗೆಳೆಯರ ಗುಂಪಿನೊಂದಿಗೆ ಹುಚ್ಚು ಹುಚ್ಚಾಗಿ ಹುಯಿಲು ಹಾಕುತ್ತಾ ಕುಣಿಯುವ ಅಭ್ಯಾಸ ಕೇವಲ ಮನರಂಜನೆಗೆ ಮಾತ್ರ ಸೀಮಿತಾವಾಗದೆ ಅದಕ್ಕೆ ದಾಸರನ್ನಾಗುವಂತೆ ಮಾಡುತ್ತದೆ.

ಉನ್ನತ ಶಿಕ್ಷಣಕ್ಕೆಂದು ದೂರದ ಕಾಲೇಜುಗಳಿಗೆ ತೆರಳುವಾಗ ಹೆತ್ತವರು ತನ್ನ ಮಗ ಅಥವಾ ಮಗಳು ಚೆನ್ನಾಗಿ ಓದಿ ಉದ್ಯೋಗ ಪಡೆಯುತ್ತಾರೆಂದು ಕನಸು ಕಟ್ಟಿರುತ್ತಾರೆ. ಆದರೆ ಬೇರೆ ಬೇರೆ ಕಡೆಗಳಿಂದ ಬಂದು ಗುಂಪುಗೂಡುವ ಯುವ ಜನತೆ ಗಲ್ಲಿಗಲ್ಲಿಯಲ್ಲಿ ಮೋಜು ಮಸ್ತಿಗಾಗಿ ಗಾಂಜಾ, ಡ್ರಗ್ಸ್, ಧೂಮಪಾನ, ಮದ್ಯಪಾನ ಎಂದು ಎಲ್ಲಾ ಚಟಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ಮತ್ತಿವಕ್ಕೆ ದುಡ್ಡಿನ ಅಗತ್ಯ ಬಿದ್ದಾಗ ಇದಕ್ಕಾಗಿಯೇ ಕಾಯುವ ಸಮಾಜದ ವಿಚ್ಛಿದ್ರಕಾರಿ ಶಕ್ತಿಗಳ ವಿಧ್ವಂಸಕ ಯೋಜನೆಗಳ ಪಾಲುದಾರರಾಗಿ ಬದಲಾಗುತ್ತಾರೆ. ತಮ್ಮ ಬದುಕನ್ನು ಬರ್ಬರಗೊಳಿಸಿಕೊಳ್ಳುತ್ತಾರೆ. ಇಲ್ಲಿ ಹೆತ್ತವರಿಗೆ ಮಕ್ಕಳು ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗುತ್ತದೆ. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂಬ ನಾಣ್ನುಡಿ ನಶೆಯ ನಿಶೆಯಲ್ಲಿ ಹಾದಿ ಬೀದಿ ಸುತ್ತತೊಡಗುತ್ತವೆ.

ನಮ್ಮ ಮಕ್ಕಳಿಗೆ ಎಂತಹ ವಾತಾವರಣ ಬೇಕು, ಬೆಳೆಸುವ ರೀತಿ ಹಾಗೂ ಅವರ ಮೇಲೆ ಹೆತ್ತವರು ತೋರಿಸುವ ಕಾಳಜಿ ಹೇಗಿರಬೇಕು ಅವರ ಚಲನ ವಲನಗಳ ಮೇಲೆ ಹೇಗೆ ನಿಗಾ ವಹಿಸಬೇಕು, ಮಕ್ಕಳು ಮತ್ತು ಹೆತ್ತವರ ನಡುವಿನ ಸಂಬಂಧ ಹೇಗಿರಬೇಕು ಎನ್ನುವುದನ್ನು ಪೋಷಕರು ಅರ್ಥಮಾಡಿಕೊಂಡು ಮಕ್ಕಳೊಂದಿಗೆ ದುಶ್ಚಟಗಳಿಂದ ಆಗುವ ಹಾನಿಗಳ ಬಗ್ಗೆ, ವ್ಯಸನಗಳಿಂದ ವ್ಯತ್ಯಯವಾಗುವ ವೈಯಕ್ತಿಕ ಆರೋಗ್ಯ ಹಾಗೂ ದಿಕ್ಕೆಡುವ ಭವಿಷ್ಯದ ಬಗ್ಗೆ ಸೌಹಾರ್ದ ಸಂವಾದಗಳ ಮೂಲಕ ಅರಿವು ಮೂಡಿಸಬೇಕು. ಮಕ್ಕಳನ್ನು ಸ್ವೇಚ್ಛೆಯಾಗಿ ಬಿಡದೆ ಜೀವನದಲ್ಲಿ ಶಿಸ್ತು ಕಲಿಸಬೇಕು. ಹಿರಿಯರು, ಪೋಷಕರು ಮತ್ತು ಸಹೃದಯರು ತಮ್ಮ ಕಲ್ಪನೆಯ ಬದುಕನ್ನು ಯುವಜನರ ಮೇಲೆ ಬಲವಂತದಿಂದ ಹೇರುವುದರ ಬದಲಾಗಿ ಯುವಜನರ ಉತ್ತಮ ಸೃಜನಾತ್ಮಕ ಆಲೋಚನೆಗಳಿಗೆ ಪೂರಕವಾದ ಪರಿಸರವನ್ನು ಸೃಷ್ಟಿಸಬೇಕಿದೆ. ಆ ಮೂಲಕ ಮುಂದಿನ ಯುವಜನಾಂಗ ತಮ್ಮ ಕನಸ ಬದುಕಿನ ಅಸ್ಮಿತೆಯನ್ನು ರೂಪಿಸಿಕೊಳ್ಳಲು ಅನುವಾಗಬೇಕಿದೆ. ಹೀಗಾದಲ್ಲಿ ಮಾತ್ರ ನಾಳಿನ ಅದರ್ಶ ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಸೃಜನಾತ್ಮಕ ಯುವ ಮನಸ್ಸುಗಳ ಪಾಲ್ಗೊಳ್ಳುವಿಕೆ ಸಾಧ್ಯವಾಗಬಹುದು ಎಂಬ ಸದಾಶಯ.